ಸಂಪುಟ : 9 ಸಂಚಿಕೆ 13 ಪುಟ : 4 ಬೆಲೆ : 3.00 ಶುಕ್ರವಾರ ಫೆಬ್ರವರಿ 9, 2024 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 9 Issue : 13 Pages : 4 Price : 3.00 Friday February 9, 2024 Gadag RNI No: KARKAN/2015/63412 E-mail: vijayasakshidaily@gmail.com Post Regn.No: GDG/72/2023-25

## ಇಂದಿನ ನೀರು ಪೂರೈಕೆ ವಿವರ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಬೆಟಗೇರಿ ಅವಳಿ ನಗರದಲ್ಲಿ ಫೆಬ್ರವರಿ 9 ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.


**ಸ್ಥಳಗಳ ವಿವರ :** ವಾರ್ಡ್ ನಂ. 3ರಲ್ಲಿ ರಾಜಾಜಿ ರಸ್ತೆ, ಅಯ್ಯಪ್ಪಜ್ಜನ ರಸ್ತೆ, ಹುಯಿಲಗೋಳ ಆಸ್ಪತ್ರೆ ರಸ್ತೆ, ಅಯ್ಯಪ್ಪಜ್ಜನ ರಸ್ತೆ, ವಾರ್ಡ್ ನಂ. 6ರಲ್ಲಿ ಶಿದ್ದಲಿಂಗನಗರ ರೊಟ್ಟಿಯವರ ಲೈನ್, ನಾವಳ್ಳಿ ಲೈನ್, ರಡ್ಡಿಯವರ ಲೈನ್, ಉಳಿದ ಕೆಲವುಭಾಗಗಳು, ವಾರ್ಡ್ ನಂ. 16, 21 ಸುಣ್ಣದ ಭಟ್ಟಿ, ಕುಷ್ಠರೋಗ ಕಾಲೋನಿಯಾ ಅಂಬೇಡ್ಕರ ನಗರ 4 ಭಾಗಗಳು, ಕುಂಬೇಶ್ವರ ನಗರ 4 ಭಾಗಗಳು, ಕೆಲವು ಉಳಿದ ಭಾಗಗಳು,

ವಾರ್ಡ್ ನಂ 35, 34ರಲ್ಲಿ 1ನೇ ಕ್ರಾಸ್, 2, 3ನೇ ಕ್ರಾಸ್, ಹನಮಂತ ದೇವರ ಗುಡಿ ಲೈನ್, ಸಚ್ಚಿದಾನಂದ ಮಠ, ಈಶ್ವರಗುಡಿ, ನೀಲಮ್ಮ ತಾಯಿಮಠ, ದೊಡ್ಡಮನಿಯವರ ಲೈನ್, ಆದರ್ಶನಗರ ಶಿದ್ದು ಪಾಟೀಲ್ ಲೈನ್, ವಾರ್ಡ್ ನಂ. 24, 26ರಲ್ಲಿ ಮಕಾನಗಲ್ಲಿ, ತೆಗ್ಗಿನ ಲಾಟ್, ಉಡಚಮ್ಮನಗುಡಿ ಲೈನ್, ಅಬ್ಬಿಗೇರಿ ಕಂಪೌಂಡ್, ಸಾಲಮನೆ, ಕಮ್ಮಾರ ಸಾಲ, ಉರ್ದು ಶಾಲೆಯ ಹಿಂದಿನ ಭಾಗಗಳು.

ಈಗಾಗಲೇ ಕುಡಿಯುವ ನೀರಿನ ನಳ ಹೊಂದಿರುವ ಬಾಕಿದಾರರ ಪಟ್ಟಿ ತಯಾರಿಸಿದ್ದು, ನಾಗರಿಕರು ಕೂಡಲೇ ತಮ್ಮ ಕುಡಿಯುವ ನೀರಿನ ಬಾಕಿ ಕರವನ್ನು ಸಂದಾಯ ಮಾಡುವಂತೆ ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕಾನೂನು, ಪ್ರವಾಸೋದ್ಯಮ ಸಚಿವರ ಜಿಲ್ಲಾ ಪ್ರವಾಸ

■ ವಿಜಯಸಾಕ್ಷಿ ಸುದ್ದಿ, ಗದಗ



ಕಾನೂನು, ನ್ಯಾಯ ಮಾನನ ಹಕ್ಕುಗಳು ಸಂಸದೀಯ ವ್ಯವಹಾರಗಳು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವರು ಪ್ರವಾಸೊದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವರಾದ ಎಚ್. ಕೆ.ಪಾಟೀಲ ಅವರು 09-02-2023 ಶುಕ್ರವಾರ ಬೆಳಗ್ಗೆ 7.30 ಗಂಟೆಗೆ ಹುಬ್ಬಳ್ಳಿಯಿಂದ ರಸ್ತೆಯ ಮೂಲಕ ಗದಗಗೆ ಆಗಮಿಸುವರು.

ಮುಂಜಾನೆ 9 ಗಂಟೆಗೆ ನಗರದ ಕಾಟನ್ ಸೇಲ್ ಸೊಸೈಟಿ ಆವರಣದಲ್ಲಿ ದಿವಂಗತ ಶ್ರೀ ಕೆ.ಎಚ್.ಪಾಟೀಲ ಅವರ ಪುಣ್ಯ ತಿಥಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಗದಗನಲ್ಲಿ ವಾಸ್ತವ್ಯ ಮಾಡುವರು.

ಫೆ.10 ಶನಿವಾರದಂದು ಮುಂಜಾನೆ 10 ಗಂಟೆಗೆ ಸ್ವಾಮಿ ವಿವೇಕಾನಂದ ಸಭಾ ಭವನದಲ್ಲಿ ತೋಟಗಾರಿಕೆ ಇಲಾಖೆಯಿಂದ ಆಯೋಜಿಸಲಾಗಿರುವ ಫಲಪುಷ್ಪ ಪ್ರದರ್ಶನ ಉದ್ಘಾಟಿಸುವರು.

ನಂತರ 10.30 ಗಂಟೆಗೆ ಜಿಲ್ಲಾಡಳಿತ ಭವನದ ಆಡಿಟೋರಿಯಂ ಸಭಾಂಗಣದಲ್ಲಿ ಆಯೋಜಿಸಲಾಗಿರುವ ಶರಣ ಮಾದಾರ ಚೆನ್ನಯ್ಯ, ಶರಣ ಸಮಗಾರ ಹರಳಯ್ಯ, ಶರಣ ಡೋಹರ ಕಕ್ಕಯ್ಯನವರ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮು. 11 ಗಂಟೆಗೆ ರಸ್ತೆಯ ಮೂಲಕ ಹಾವೇರಿ ತಾಲೂಕು ಅಗಡಿಗೆ ಪ್ರಯಾಣ ಬೆಳೆಸುವರು.

ಮಧ್ಯಾಹ್ನ 12 ಗಂಟೆಗೆ ಅಗಡಿಯ ವಿವಿದೋದ್ದೇಶ ಪ್ರಾಥಮಿಕ ಗ್ರಾಮೀಣ ಸಹಕಾರಿ ಸಂಘದ ಆವರಣದಲ್ಲಿ ಆಯೋಜಿಸಲಾಗಿರುವ ನೂತನ ಗೋದಾಮು ಹಾಗೂ ವಾಣಿಜ್ಯ ಮಳಿಗೆಗಳ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಳ್ಳುವರು ಎಂದು ಪ್ರಕಟಣೆ ತಿಳಿಸಿದೆ.

## ಇಂದು ಪೂರ್ವಭಾವಿ ಸಭೆ

■ ವಿಜಯಸಾಕ್ಷಿ ಸುದ್ದಿ, ಗದಗ

ಸರ್ಕಾರದ ಆದೇಶದನ್ವಯ ಫೆಬ್ರವರಿ 16ರಂದು ಆಚರಿಸಲಾಗುವ ಸವಿತಾ ಮಹರ್ಷಿ ಜಯಂತಿ ನಿಮಿತ್ತ ಫೆಬ್ರವರಿ 9ರಂದು ಸಂಜೆ 4.30 ಗಂಟೆಗೆ ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಪೂರ್ವಭಾವಿ ಸಭೆ ಕರೆಯಲಾಗಿದೆ. ಸಭೆಗೆ ಹಾಜರಾಗಿ ಸಲಹೆ/ಅಭಿಪ್ರಾಯ ನೀಡಬೇಕೆಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಅರಣ್ಯ ಇಲಾಖೆಯಿಂದ ಚಿರತೆ ಸೆರೆ ಹಿಡಿಯಲು ನಾನಾ ತಂತ್ರ | ಗ್ರಾಮಸ್ಥರಲ್ಲಿ ಹೆಚ್ಚಿದ ಆತಂಕ

# ವಿಫಲವಾದ 'ಆಪರೇಷನ್ ಚಿರತೆ'

■ ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ

ಗಜೇಂದ್ರಗಡ ಸುತ್ತಮುತ್ತ ಇತ್ತೀಚೆಗೆ ಚಿರತೆ ದಾಳಿ ಪ್ರಕರಣಗಳು ಹೆಚ್ಚುತ್ತಿವೆ. ಈವರೆಗೂ ಹಸು, ನಾಯಿ ಇತ್ಯಾದಿ ಸಾಕುಪ್ರಾಣಿಗಳನ್ನಷ್ಟೇ ಹೊತ್ತೊಯ್ಯುತ್ತಿದ್ದ ಚಿರತೆ, ಎರಡು ದಿನಗಳ ಹಿಂದೆ ಮನುಷ್ಯರ ಮೇಲೂ ದಾಳಿ ನಡೆಸಿರುವುದು ಗ್ರಾಮಸ್ಥರಲ್ಲಿ ಆತಂಕಕ್ಕೆ ಕಾರಣವಾಗಿದೆ. ಗಜೇಂದ್ರಗಡ ತಾಲೂಕಿನ ಜಿಗೇರಿ ಗ್ರಾಮದ ಹೊರವಲಯದ ಬಾಳೆ ತೋಟವೊಂದರಲ್ಲಿ ಮರಿಗಳೊಂದಿಗೆ ಬೀಡುಬಿಟ್ಟಿದ್ದ ಚಿರತೆ, ತನ್ನ ಮರಿಗಳಿಗೆ ಅಪಾಯವಾಗಬಹುದು ಎಂದು ಗ್ರಹಿಸಿ, ಬಾಳೆ ತೋಟದಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರ ಮೇಲೆ ದಾಳಿ ಮಾಡಿತ್ತು.

ತಕ್ಷಣ ಎಚ್ಚೆತ್ತ ಅರಣ್ಯ ಇಲಾಖೆ ಗುರುವಾರ ಬೆಳಿಗ್ಗೆಯಿಂದಲೇ 'ಆಪರೇಷನ್ ಚಿರತೆ' ಕಾರ್ಯಾಚರಣೆ ನಡೆಸಿತು. ಇಡೀ ಬಾಳೆ ತೋಟದ ಸುತ್ತ ಬೇಲಿ ಅಳವಡಿಸಿ, ಬಾಳೆಗಿಡಗಳನ್ನು ನೆಲಸಮ ಮಾಡಿ ಹುಡುಕಿದರೂ ಚಿರತೆ ಪತ್ತೆಯಾಗಿಲ್ಲ. ಜೀಗೇರಿ ಗ್ರಾಮದಲ್ಲಿ ಶರಣಪ್ಪ ಆವಾರಿ ಅವರ ಜಮೀನಿನಲ್ಲಿ ಬೆಳಿಗ್ಗೆ ಕಾರ್ಯಾಚರಣೆಗೆ ಇಳಿದ 50ಕ್ಕೂ ಅಧಿಕ ಅರಣ್ಯ ಇಲಾಖೆಯ ಸಿಬ್ಬಂದಿಗಳು,



ಚಿರತೆ ಶೋಧಕ್ಕೆ ಅನುಕೂಲವಾಗುವಂತೆ ಬಾಳೆತೋಟವನ್ನು ಕಡಿದು ಹಾಕಿ, ತೋಟದಲ್ಲಿ 1 ಬೋನು ಇರಿಸಿದ್ದು, ಅರಣ್ಯ ಇಲಾಖೆ ಅಧಿಕಾರಿಗಳು ಚಿರತೆಯನ್ನು ಬೋನಿಗೆ ಕೆಡವಲು ಬೋನಿನ ಇನ್ನೊಂದು ಬದಿಯಲ್ಲಿ ನಾಯಿಯನ್ನು ಕಟ್ಟಿದ್ದರು.

ಈ ಕಾರ್ಯಾಚರಣೆಯ ಮುಂದುವರೆದ ಭಾಗವಾಗಿ, ಗ್ರಾಮಸ್ಥರ ಜೀವ ಭಯಕ್ಕೆ ಕಾರಣವಾಗಿರುವ ಚಿರತೆಯನ್ನು ಪತ್ತೆ ಹಚ್ಚಿ, ಬೋನಿಗೆ ಕೆಡವಲು ಸಕಲ ಸಿದ್ಧತೆ ಮಾಡಿಕೊಂಡ ಅರಣ್ಯ ಇಲಾಖೆ, 5 ವಿಶೇಷ ತಂಡಗಳನ್ನು ರಚಿಸಿ ಅಂದಾಜು 50 ಸಿಬ್ಬಂದಿಗಳನ್ನು ಕಾರ್ಯಾಚರಣೆಗೆ ಬಳಸಿಕೊಂಡು ಚಿರತೆಯನ್ನು ಸೆರೆ ಹಿಡಿಯಲು ಜೀಗೇರಿ ಗ್ರಾಮದ ಸುತ್ತಲಿನ ಪ್ರದೇಶದಲ್ಲಿ, ತೋಟಗಳ ಮೇಲೆ ಡ್ರೋಣ್ ಕ್ಯಾಮರಾ ಮೂಲಕ ಚಿರತೆಯ ಪತ್ತೆ ಕಾರ್ಯ ನಡೆಸಿತಾದರೂ, ಈ ಕಾರ್ಯಾಚರಣೆಯೂ ಫಲ ಕೊಡಲಿಲ್ಲ.

ಜಿಲ್ಲಾ ವಲಯ ಅರಣ್ಯಧಿಕಾರಿ ಮಂಜುನಾಥ ಮೇಗಲಮನಿ, ಮುಂಡರಗಿ ಆರ್‌ಎಫ್‌ಓ ವೀರೇಂದ್ರ ಮರಿಬಸಣ್ಣವರ, ರೋಣ ಆರ್‌ಎಫ್‌ಓ ಅನ್ವರ ಕೋಲ್ಹಾರ ಹಾಗೂ ಗಜೇಂದ್ರಗಡ ಆರ್‌ಎಫ್‌ಓ ಪ್ರವೀಣಕುಮಾರ ಸಾಸಿವಿಹಳ್ಳಿ ಸೇರಿ ಬಿಂಕದಕಟ್ಟಿ, ಅರವಳಿಕೆ ತಜ್ಞರಾದ ನೀಖಿಲ್ ಕುಲಕರ್ಣಿ ಮತ್ತು ಜಟ್ಟಣ್ಣವರ ತಂಡದಲ್ಲಿದ್ದರು.

ಕಾರ್ಯಾಚರಣೆಯ ವೇಳೆ ಸುತ್ತ ನೆರೆದಿದ್ದ ಗ್ರಾಮಸ್ಥರಷ್ಟೇ ಅಲ್ಲದೆ, ಅರಣ್ಯ ಇಲಾಖೆಯ ಸಿಬ್ಬಂದಿಗಳಲ್ಲಿಯೂ ಆತಂಕ, ಭಯ ಮನೆಮಾಡಿತ್ತು. ಯಾವ ಕ್ಷಣದಲ್ಲಿ ಚಿತರೆ ಹೊರನೆಗೆದು ದಾಳಿ ಮಾಡುತ್ತದೋ ಎಂಬ ದಿಗಿಲು ಎಲ್ಲರ ಮೊಗದಲ್ಲಿತ್ತು. ಬಾಳೆ ತೋಟವನ್ನು ಸಂಪೂರ್ಣ ನೆಲಸಮ ಮಾಡಿ ಇಂಚಿಂಚೂ ಬಿಡದೇ ಶೋಧ ಕಾರ್ಯ ನಡೆಸಿದರೂ ಚಿರತೆಯ ಪತ್ತೆಯಾಗಲಿಲ್ಲ.

> 18 ವರ್ಷದ ಉದಯಕುಮಾರ್ ನಿಡಶೇಸಿ ಬಾಳೆತೋಟದಲ್ಲಿ ಕೆಲಸ ಮಾಡುತ್ತಿದ್ದಾಗ ದಾಳಿ ನಡೆಸಸಿದ್ದ ಚಿರತೆ ಕುತ್ತಿಗೆ, ಎದೆ, ಬೆನ್ನಿನ ಭಾಗಕ್ಕೆ ಗಂಭೀರವಾಗಿ ಗಾಯಗೊಳಿಸಿತ್ತು. ಆತ ಜೋರಾಗಿ ಕಿರುಚಿದಾಗ, ಅಲ್ಲಿಯೇ ಸಮೀಪದಲ್ಲಿದ್ದ ಮಂಜುನಾಥ ಎನ್ನುವ ಕಾರ್ಮಿಕ ಕಲ್ಲಿನಿಂದ ಚಿರತೆಗೆ ಹೊಡೆದಿದ್ದಾನೆ. ಆಗ ಚಿರತೆ ಸ್ಥಳದಿಂದ ಕಾಲ್ಕಿತ್ತಿತ್ತು. ಚಿರತೆ ದಾಳಿ ಗಜೇಂದ್ರಗಡ ಭಾಗದ ಹತ್ತಾರು ಗ್ರಾಮಗಳಲ್ಲಿ ಆತಂಕ ಹೆಚ್ಚಿಸಿತ್ತು. ಸಾಕಷ್ಟು ಬಾರಿ ದೂರು ನೀಡಿದ್ದರೂ ಸುಮ್ಮನಿದ್ದ ಅರಣ್ಯ ಇಲಾಖೆ ಈಗ ಎಚ್ಚೆತ್ತು ಕಾರ್ಯಾಚರಣೆಗಿಳಿಯಿತಾದರೂ ಫಲಕಾರಿಯಾಗಲಿಲ್ಲ.

> ಕಳೆದ 2-3 ದಿನಗಳಿಂದ ಚಿರಚಿತಜ ಹಸಿವಿನಿಂದ ಇರುವ ಸಾಧ್ಯತೆಯಿದ್ದು, ಮತ್ತೆ ದಾಳಿ ಮಾಡಿದ ಸ್ಥಳಕ್ಕೆ ಆಗಮಿಸುವ ನಿರೀಕ್ಷೆಯಿರುವ ಹಿನ್ನೆಲೆಯಲ್ಲಿ ಒಂದ್ ಬೋನು ಇಡಲಾಗಿದೆ. ಚಿರತೆಯನ್ನು ಬೋನಿಗೆ ಕೆಡವಲು ಅರಣ್ಯ ಇಲಾಖೆ ಎಲ್ಲ ಕ್ರಮಗಳನ್ನು ಕೈಗೊಂಡಿದ್ದು, ಗ್ರಾಮಸ್ಥರು ಎಚ್ಚರಿಕೆಯಿಂದ ಇರುವಂತೆ ತಿಳಿಸಲಾಗಿದೆ.
>
> – ಮಂಜುನಾಥ ಮೇಗಲಮನಿ.
> ಜಿಲ್ಲಾ ವಲಯ ಅರಣ್ಯಾಧಿಕಾರಿ.

### ಸಾಮರ್ಥ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮದಲ್ಲಿ ಕೆ. ಗುರುಪ್ರಸಾದ ಕರೆ

# ಮಕ್ಕಳ ಕಾನೂನುಗಳನ್ನು ಪ್ರತಿಯೊಬ್ಬರೂ ಅರಿಯಿರಿ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಮಕ್ಕಳ ರಕ್ಷಣಾ ನಿರ್ದೇಶನಾಲಯ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಜಿಲ್ಲಾ ಪೊಲೀಸ್ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ಸಹಯೋಗದಲ್ಲಿ ಗುರುವಾರ ಬಾಲ ನ್ಯಾಯ ಕಾಯ್ದೆ, ಬಾಲ್ಯ ವಿವಾಹ ನಿಷೇಧ ಕಾಯ್ದೆ, ಆರ್.ಟಿ.ಇ. ಕಾಯ್ದೆ, ಪೋಕ್ಸೋ ಕಾಯ್ದೆ, ಬಾಲಕಾರ್ಮಿಕ-ಬಿಕ್ಷಾಟನೆ ನಿಷೇಧ ಹಾಗೂ ನಿಯಂತ್ರಣ ಕಾಯ್ದೆಗಳ ಕುರಿತು ವಸತಿ ಶಾಲೆಗಳ ಪ್ರಾಂಶುಪಾಲರು, ವಸತಿ ನಿಲಯಗಳ ಮೇಲ್ವಿಚಾರಕರು ಹಾಗೂ ಸರಕಾರಿ ಪ್ರೌಢಶಾಲೆಗಳ ಮುಖ್ಯೋಪಾಧ್ಯಾಯರುಗಳಿಗೆ ಸಾಮರ್ಥ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ



ಸದಸ್ಯ ಕಾರ್ಯದರ್ಶಿ ಕೆ. ಗುರುಪ್ರಸಾದ ಮಾತನಾಡಿ, ಪೋಕ್ಸೋ ಕಾಯ್ದೆ, ಬಾಲನ್ಯಾಯ ಕಾಯ್ದೆ, ಬಾಲ್ಯವಿವಾಹ ಕಾಯ್ದೆಗಳ ಕುರಿತು ಪ್ರತಿಯೊಬ್ಬರಿಗೂ ತಿಳುವಳಿಕೆ ಇರಬೇಕು. ಬಾಲನ್ಯಾಯ ಕಾಯ್ದೆಯಲ್ಲಿ 18 ವರ್ಷದೊಳಗಿನ ಮಗು & ವ್ಯಕ್ತಿಯನ್ನು ಬಾಲಾಪರಾಧಿ ಎನ್ನದೆ, 'ಕಾನೂನು ಸಂಘರ್ಷಕ್ಕೊಳಪಟ್ಟ ಮಗು' ಎಂದು ಕರೆಯಲಾಗುತ್ತದೆ. ಇಂತಹ ಮಕ್ಕಳನ್ನು ಸಾಮಾನ್ಯವಾಗಿ ನ್ಯಾಯಾಲಯಕ್ಕೆ ಹಾಜರುಪಡಿಸುವುದಿಲ್ಲ. ಬದಲಾಗಿ ಬಾಲನ್ಯಾಯ ಮಂಡಳಿಯಲ್ಲಿ ಹಾಜರುಪಡಿಸಲಾಗುತ್ತದೆ ಎಂದರು.

ಹರೀಶ ಜೋಗಿ ಮಕ್ಕಳ ಹಕ್ಕುಗಳು, ಬಾಲ್ಯವಿವಾಹ ನಿಷೇಧ ಕಾಯ್ದೆ ಕುರಿತು ಉಪನ್ಯಾಸ ನೀಡಿದರು. ಸಿಸ್ಟರ್ ಡುಲ್ಸಿನ್, ಬಾಲನ್ಯಾಯ ಕಾಯ್ದೆ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ ಕುರಿತು, ದತ್ತು ಮಾರ್ಗಸೂಚಿ ಕುರಿತು ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ ಎಂ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಪ್ರಶಾಂತ ವರಗಪ್ಪನವರ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅಧಿಕಾರಿ ಅಮಿತ ಬಿದರಿ, ಪೊಲೀಸ್ ಇಲಾಖೆಯಧಿಕಾರಿಗಳು ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿ-ಸಿಬ್ಬಂದಿಗಳು ಹಾಜರಿದ್ದರು. ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ರಫೀಕಾ ಹಳ್ಳೂರು ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಮಲ್ಲಪ್ಪ ಹೊಸಳ್ಳಿ ಕಾರ್ಯಕ್ರಮ ನಿರೂಪಿಸಿದರು.

> ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶೇಖರಗೌಡ ರಾಮತ್ನಾಳ ಮಾತನಾಡಿ, ಎಲ್ಲಾ ಮುಖ್ಯೋಪಾಧ್ಯಾಯರು ಬಾಲ್ಯವಿವಾಹ ನಿಷೇಧಾಧಿಕಾರಿಗಳಾಗಿರುತ್ತಾರೆ. ತಮ್ಮ ಜವಾಬ್ದಾರಿ ಮತ್ತು ಕರ್ತವ್ಯಗಳ ಬಗ್ಗೆ ಮಾಹಿತಿ ಇರಬೇಕು. ಅದೇ ರೀತಿ ಹಾಸ್ಟೆಲ್ ವಾರ್ಡನ್‌ಗಳು ಕೂಡಾ ಮಕ್ಕಳಿಗೆ ಸಂಬಂಧಿಸಿದ ನೀತಿ-ನಿಯಮಗಳನ್ನು ತಿಳಿದುಕೊಂಡು ಕಾರ್ಯನಿರ್ವಹಿಸಬೇಕೆಂದು ತಿಳಿಸಿದರು.

## ಕೃಷ್ಣಗೌಡ ಪಾಟೀಲರಿಂದ ಕಾಮಗಾರಿಗಳಿಗೆ ಭೂಮಿಪೂಜೆ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ-ಬೆಟಗೇರಿ ನಗರಸಭೆಯ 23ನೇ ವಾರ್ಡ್‌ನ ಒಕ್ಕಲಗೇರಿ ಓಣಿಯ ಭರಮಪ್ಪ ದೇವಸ್ಥಾನದ ಹತ್ತಿರ ನಾಗರಿಕರ ಬಹುದಿನಗಳ ಬೇಡಿಕೆಯಾದ ರಸ್ತೆಗಳ ಅಭಿವೃದ್ಧಿ, ಗಟಾರ ವ್ಯವಸ್ಥೆ ಹಾಗೂ ಪ್ರಮುಖ ರಸ್ತೆಗಳಲ್ಲಿ ಫುಟ್‌ಪಾತ್ ನಿರ್ಮಾಣಗಳಂತಹ ಅಭಿವೃದ್ಧಿ ಕಾಮಗಾರಿಗಳಿಗೆ ಗದಗ ಶಹರ ಯುವ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿ, ಯುವ ನಾಯಕ ಕೃಷ್ಣಗೌಡ ಎಚ್.ಪಾಟೀಲರ ಉಪಸ್ಥಿತಿಯಲ್ಲಿ ನಗರಸಭೆಯ ಸದಸ್ಯ ಜನಾಬ್ ಬರಕತಲಿ ಮುಲ್ಲಾ, ಮಾಬೂಸಾಬ್ ಅಡರಕಟ್ಟಿ, ನಾಗಪ್ಪ ಗುಗ್ಗರಿ, ಕಾಂಗ್ರೆಸ್ ಮುಖಂಡರಾದ ಎಚ್.ಕೆ. ಮುಲ್ಲಾ, ಸಾಮಾಜಿಕ ಕಾರ್ಯಕರ್ತ ರಾಘವೇಂದ್ರ ಪಾಲನಕರ, ಬಸಪ್ಪ ಗುಗ್ಗರಿ ನೇತೃತ್ವದಲ್ಲಿ ಗುರುವಾರ ಭೂಮಿಪೂಜೆ ನೆರವೇರಿಸಿದರು.

ಈ ಸಂದರ್ಭದಲ್ಲಿ ಜಗದೀಶ ಚನ್ನಪ್ಪಗೌಡರ, ಮಹಾದೇವಪ್ಪ ಮೂಲಿಮನಿ, ಮಂಜುನಾಥ



ಬಸಪ್ಪ ಹುಡೇದ್, ಎಸ್.ಸಿ. ಬಳಗನೂರಮಠ, ಬಸವರಾಜ ತುಪ್ಪದ, ಮುತ್ತು ಜಾಲಗಾರ್, ರಾಜು ಖೋಡೆ, ಬಸವರಾಜ ಬಟ್ಟೂರ, ಖಾದರ್ ಕಿರೆಸೂರ್, ಹನಮಂತಪ್ಪ ಬನ್ನಿಗೊಣ್ಣವರ, ವಿರೂಪಾಕ್ಷಪ್ಪ ಅಕ್ಕಿ, ದೇವರಾಜಗೌಡ ಪಾಟೀಲ, ದೇವೇಂದ್ರಪ್ಪ ಹೊನಗಣ್ಣವರ, ರಮೇಶ ಸತ್ಯಪ್ಪನವರ, ರಾಜು ಮಾಳಗಿ, ನಿಂಗಪ್ಪ ಗೌಡರ, ಮುರಗೇಶ ಹಡಗಲಿ, ಹಮೀದ ಬಾವಿಕಟ್ಟಿ, ದಾವಲಸಾಬ್ ಕುರಹಟ್ಟಿ, ಚಂದ್ರು ಕಮತರ ಮಡಿವಾಳಪ್ಪ ಕಮತರ, ರೆಹಮಾನ್ ಸಾಬ್ ಮುಲ್ಲಾ, ಸಿದ್ದಪ್ಪ ಮೂರ್ಲಾಪೂರ, ಬಸವರಾಜ ಹತ್ತಿಶೆಟ್ಟರ್, ಲಕ್ಷ್ಮಣ ಬಡಿಗೇರ್, ಸಿದ್ದಪ್ಪ ತುರಾಕಾಣಿ, ಬಸವಣ್ಣೆಪ್ಪ ಮೂಲಿಮಾನಿ, ಗೋವಿಂದಪ್ಪ ನಾಗರಾಳ, ನೀಲಪ್ಪ ಪೂಜಾರ, ಮುತ್ತು ರೋಣದ, ಬಸವರಾಜ ಸತ್ಯಪ್ಪನವರ, ಶಿವಪ್ಪ ಶಿವಶಿಂಪಗೇರ, ಸಿದ್ದು ಹೊಂಬಳ, ಬಸವರಾಜ ಹತ್ತಿ, ಅಶೋಕ ಮಲಿಯಪ್ಪನವರ, ಸುದೀಪ ಸತ್ಯಪ್ಪನವರ, ಪರಶುರಾಮ್ ಮುಗಳಿ, ರೈತ ಮುಖಂಡರಾದ ಪರಮೇಶಪ್ಪ ಜಂತಲಿ, ಸೋಮಣ್ಣ ಪುರದ, ಜಗದೀಶ್ ಚನ್ನಪ್ಪಗೌಡರ, ಸತ್ಯಪ್ಪ ಗಿಡ್ಡಹನಮಣ್ಣವರ, ಜಾಕೀರ ಸಾಬ್ ಕುನ್ನಿಬಾವಿ ಮಂಜು ಹಿತ್ತಲಮನಿ, ಸುಲೇಮಾನ್ ಡೋಲಿ, ಬಸವರಾಜ ತೋಟದ, ದಾವೂದ್ ಡೋಲಿ, ಮುತ್ತಪ್ಪ ಹೋನಗಣ್ಣವರ, ಮಹ್ಮದಷರೀಫ್ ಅಬ್ಬಿಗೇರಿ, ಆಸಿಫ್ ಮುಲ್ಲಾ, ಶೈನಾಜ್ ಮುಲ್ಲಾ, ಗಂಗಪ್ಪ ಅಮರಗೋಳ, ಮುತ್ತು ಗಾಣಿಗೇರ, ಮೆಹಬೂಬ್ ಸಾಬ್ ಆಡರಕಟ್ಟಿ, ಮಹಮ್ಮದ ಶಾಹಿದ್ ಮುಲ್ಲಾ, ಈರಣ್ಣ ಕರಬಿಷ್ಟಿ ಮುಂತಾದವರು ಉಪಸ್ಥಿತರಿದ್ದರು.

### ವಿಭಾಗೀಯ ಅಂಚೆ ಅಧೀಕ್ಷಕ ಎನ್.ಜಿ.ಭಂಗೀಗೌಡರ ಅಭಿಮತ

# ಅಂಚೆ ಇಲಾಖೆಯಿಂದ ಫಲಾನುಭವಿಗಳ ಮನೆ ಬಾಗಿಲಿಗೆ ಸೇವೆ

■ ವಿಜಯಸಾಕ್ಷಿ ಸುದ್ದಿ, ಗದಗ

ಕೇಂದ್ರ ಸರ್ಕಾರ ಅಂಚೆ ಇಲಾಖೆಯ ಮೂಲಕ ವಿವಿಧ ಸೇವೆಗಳನ್ನು ಜನರ ಮನೆ ಬಾಗಿಲಿಗೆ ತಲುಪಿಸುವ ಕೆಲಸವನ್ನು ನೀಡುತ್ತಿದೆ. ಅವುಗಳನ್ನು

ಗ್ರಾಹಕರ ವಿಶ್ವಾಸಾರ್ಹತೆ ಸೇವೆ ನೀಡಬೇಕು ಎಂದು ಗದಗ ವಿಭಾಗೀಯ ಅಂಚೆ ಅಧೀಕ್ಷಕ ಎನ್.ಜಿ.ಭಂಗೀಗೌಡರ ಅಭಿಪ್ರಾಯಪಟ್ಟರು.

ನಗರದ ಪ್ರಧಾನ ಅಂಚೆ ಕಚೇರಿ ಆವರಣದಲ್ಲಿ ಗುರುವಾರ ಸಂಜೆ ನಡೆದ ಗದಗ ಉಪ ವಿಭಾಗದ ಅಂಚೆ ಇಲಾಖೆ ವಿವಿಧ ಯೋಜನೆ ಅಭಿವೃದ್ಧಿ ಸಭೆಗೆ ಚಾಲನೆ ನೀಡಿ ಮಾತನಾಡಿದ ಅವರು, ಕೇವಲ ಅಂಚೆ ಪತ್ರಗಳಿಗೆ ಸೀಮಿತವಾಗಿದ್ದ ಅಂಚೆ ಇಲಾಖೆ ಡಿಜಿಟಲೀಕರಣ,



ಬ್ಯಾಂಕಿಂಗ್, ವಿಮಾ, ಉಳಿತಾಯ ಖಾತೆ, ಠೇವಣಿ, ಅಪಘಾತ ವಿಮೆ ಸೇರಿದಂತೆ ಹಲವು ಯೋಜನೆಗಳನ್ನು ಪರಿಚಯಿಸಲಾಗುತ್ತಿದೆ. ಅವುಗಳನ್ನು ಹೆಚ್ಚೆಚ್ಚು ಜನರಿಗೆ ತಲುಪಿಸುವ ದಿಸೆಯಲ್ಲಿ ಪ್ರತಿಯೊಬ್ಬ ಅಂಚೆ ಸಿಬ್ಬಂದಿ ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂದರು.

ಉಪ ಅಂಚೆ ಅಧೀಕ್ಷಕ ಶ್ರೀಕಾಂತ ಜಾದವ, ಸಹಾಯಕ ಅಂಚೆ ಅಧೀಕ್ಷಕ ಬಿ.ಪಿ.ಮಾಳಗಿ ಮಾತನಾಡಿದರು.

ಐಪಿಪಿಬಿ ಮ್ಯಾನೇಜರ್ ಆನಂದ ಸಾಗರ, ಪ್ರಧಾನ ಅಂಚೆ ಪಾಲಕರಾದ ಎಚ್.ಪಿ.ಅತ್ತಿಗೇರಿ ಮತ್ತಿತರು ಉಪಸ್ಥಿತರಿದ್ದರು.

## ಸಾಕ್ಷಿ ಸುಭಾಷಿತ

ಇತರರ ದೋಷಗಳನ್ನು ತೋರುವಲ್ಲಿ ಎಲ್ಲರೂ ಸದಾ ನಿಪುಣರಾಗಿಯೇ ಇರುತ್ತಾರೆ.

–ಸುಭಾಷಿತ

## ಸಂಪಾದಕೀಯ

# ಕಾಂಗ್ರೆಸ್ ಸರ್ಕಾರದ ವಿರುದ್ಧವೂ ಗುತ್ತಿಗೆದಾರರ ಕಮಿಷನ್ ಆರೋಪ

ಬಸವರಾಜ್ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರಕ್ಕೆ ಬಹುದೊಡ್ಡ ಸಂಕಷ್ಟ ತಂದೊಡ್ಡಿದ್ದ ಗುತ್ತಿಗೆದಾರರ 40 ಪ್ರತಿಶತ ಕಮಿಷನ್ ಆರೋಪ, ಕಾಂಗ್ರೆಸ್ ಸರ್ಕಾರದ ವಿರುದ್ಧವೂ ಕೇಳಿ ಬರುತ್ತಿದೆ.

ಬಿಜೆಪಿ ಸರ್ಕಾರದ ವಿರುದ್ಧ ಗಂಭೀರ ಆರೋಪ ಮಾಡಿದ್ದ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ, ಕಾಂಗ್ರೆಸ್ ಸರ್ಕಾರದ ವಿರುದ್ಧವೂ ಅದೇ ಆರೋಪವನ್ನ ಮಾಡಿದ್ದಾರೆ. ಆದರೆ ಈ ಬಾರಿ ಕಮಿಷನ್ ಆರೋಪದಲ್ಲಿ ಅಧಿಕಾರಿಗಳು ಶಾಮಿಲ್ ಆಗಿದ್ದಾರೆ ಎನ್ನುವ ಬದಲಾವಣೆಯ ಸಮಜಾಯಿಸಿ ಒಂದನ್ನ ನೀಡಿದ್ದಾರೆ.

ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಆದೇಶ ಮೀರಿಯು ರಾಜ್ಯ ಸರ್ಕಾರ ಪ್ಯಾಕೇಜ್ ಕಾಮಗಾರಿಗಳ ಟೆಂಡರ್ ಆಹ್ವಾನಿಸಿರುವುದನ್ನು ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ತೀಕ್ಷ್ಣವಾಗಿ ಟೀಕಿಸಿದ್ದಾರೆ. ಹೈ ಕೋರ್ಟ್ ಆದೇಶದ ಪ್ರಕಾರ ಪ್ಯಾಕೇಜ್ ಕಾಮಗಾರಿಗಳನ್ನು ಬಿಟ್ಟು ಪ್ರತ್ಯೇಕವಾಗಿ ಟೆಂಡರ್ ಕರೆಯುವಂತೆ ಸರ್ಕಾರವನ್ನ ಒತ್ತಾಯಿಸಿದ್ದಾರೆ.

ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಮಾಡಿರುವ ಆರೋಪ ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಮೇಲೆ ಯಾವ ರೀತಿ ಪರಿಣಾಮ ಬೀರಲಿದೆ ಎನ್ನುವುದನ್ನು ಕಾದು ನೋಡೋಣ. ಆದರೆ ಕೆಂಪಣ್ಣ ಕಾಂಗ್ರೆಸ್ ಸರ್ಕಾರದ ಏಜೆಂಟ್ ಎಂದು ಬಿಂಬಿಸಿದ್ದ ಬಿಜೆಪಿ, ಈ ಆರೋಪನ್ನ ಯಾವ ರೀತಿ ಸ್ವೀಕರಿಸಿದೆ ಎನ್ನುವುದು ಕುತೂಹಲಕಾರಿ ಪ್ರಶ್ನೆಯಾಗಿದೆ.

ಬಿಜೆಪಿ ಕೆಂಪಣ್ಣ ಅವರ ಹೇಳಿಕೆಯನ್ನು ಗಂಭೀರವಾಗಿ ಪರಿಗಣಿಸಿ, ಅದಕ್ಕೊಂದು ರಾಜಕೀಯ ಬಣ್ಣ ಕಲ್ಪಿಸಿದರೆ, ಬಿಜೆಪಿ ಸರ್ಕಾರದ ಅವಧಿಯಲ್ಲಿ ಕೆಂಪಣ್ಣ ಮಾಡಿರುವ ಆರೋಪ ಸತ್ಯ ಎಂದು ಪರೋಕ್ಷವಾಗಿ ಒಪ್ಪಿಕೊಂಡಂತಾಗುತ್ತದೆ. ಒಂದು ವೇಳೆ ಕೆಂಪಣ್ಣ ಆರೋಪವನ್ನ ಅಲ್ಲಗಳದರೆ, ರಾಜಕೀಯ ನಷ್ಟ ಎದುರಿಸಬೇಕಾಗುತ್ತದೆ.

ಒಟ್ಟಾರೆ ಗುತ್ತಿಗೆದಾರರ ಸಂಘದ ರಾಜ್ಯಾಧ್ಯಕ್ಷ ಕೆಂಪಣ್ಣ ಮಾಡಿರುವ ಆರೋಪ ಕಾಂಗ್ರೆಸ್ ಮತ್ತು ಬಿಜೆಪಿಯಲ್ಲಿ ಸಂಚಲನ ಸೃಷ್ಟಿಸುವುದು ನಿಜ. ಮುಂದಿನ ದಿನಗಳಲ್ಲಿ ಕೆಂಪಣ್ಣ ಆರೋಪ ಯಾವ ರೀತಿ ತಿರುವು ಪಡೆದುಕೊಳ್ಳುತ್ತದೆ ಕಾದು ನೋಡೋಣ.

## ಭಕ್ತಿ ಮಾರ್ಗವನ್ನು ಜನಸಮಾನ್ಯರಿಗೆ ಪರಿಚಯಿಸಿದ ಪುರಂದರ ದಾಸರ ಪುಣ್ಯತಿಥಿಯ ನಿಮಿತ್ತ ಲೇಖನ

# ಮಾನವ ಜನ್ಮ ದೊಡ್ಡದು...

'ಮಾನವ ಜನ್ಮ ದೊಡ್ಡದು, ಇದ ಹಾನಿ ಮಾಡಲು ಬೇಡಿ ಹುಚ್ಚಪ್ಪಗಳಿರಾ...' ಎಂಬ ಪದವು ಮನುಷ್ಯ ಜನ್ಮದ ಬದುಕಿನ ಸಾರ್ಥಕತೆಯನ್ನು ಎತ್ತಿ ತೋರಿಸುತ್ತದೆ. ಭಗವಂತನು ಮನುಷ್ಯನಿಗೆ ಕೈ ಕಾಲು, ಕಣ್ಣು, ನಾಲಿಗೆ ಹೀಗೆ ವಿವಿಧ ಅವಯವಗಳ ದೊಡ್ಡ ಸಂಪತ್ತನ್ನೇ ಅನುಗ್ರಹಿಸಿದ್ದಾನೆ. ಮನುಷ್ಯನ ಪ್ರತಿಯೊಂದು ಇಂದ್ರಿಯಗಳು ಅದ್ಭುತ ಸಂಪತ್ತಾಗಿವೆ. ಪ್ರಾಣಿಗಳಿಗಾದರೂ ಕೈ ಕಾಲು ಕಣ್ಣು ಅವಯವಗಳಿವೆ. ಮನುಷ್ಯ ಎಲ್ಲ ಪ್ರಾಣಿಗಳಿಗಿಂತ ಬುದ್ಧಿವಂತ ಜೀವಿಯಾಗಿದ್ದಾನೆ. ಮನುಷ್ಯನಿಗೆ ಸರಿ ಹಾಗೂ ತಪ್ಪು ಎಂದು ವಿವೇಚನೆ ಮಾಡುವ ಶಕ್ತಿಯನ್ನು ಕೊಟ್ಟಿದ್ದಾನೆ ಹಾಗೂ ಜ್ಞಾನವನ್ನು ಕರುಣಿಸಿ ಅದರಿಂದ ಪುಣ್ಯಸಂಪಾದನೆ ಮಾಡಲು ಅವಕಾಶ ಕಲ್ಪಿಸಿದ್ದಾನೆ. ಹೀಗಾಗಿ ಮನುಷ್ಯ ಜನ್ಮ ದುರ್ಲಭವಾಗಿದ್ದು ಅದನ್ನು ಹಾಳು ಮಾಡಿಕೊಳ್ಳಲಾರದೇ ಸತ್ಕಾರ್ಯಗಳಿಗೆ ತೊಡಗಿಸಿಕೊಳ್ಳಬೇಕೆಂದು ಹರಿದಾಸ ಸಾಹಿತ್ಯದ ಕಣ್ಮಣಿಗಳಾದ ಪುರಂದರದಾಸರು ತಮ್ಮ ಪದಗಳ ಮೂಲಕ ಮನುಷ್ಯ ಕುಲಕ್ಕೆ ಅಪೂರ್ವ ಮತ್ತು ಅದ್ಭುತ ಸಂದೇಶ ನೀಡಿದ್ದಾರೆ.

ಇಂತಹ ಅನೇಕ ಅರ್ಥಪೂರ್ಣ ಪದಗಳನ್ನು, ಭಕ್ತಿಗೀತೆಗಳನ್ನು, ಸುಳಾದಿಗಳನ್ನು ರಚಿಸಿರುವ ಪುರಂದರದಾಸರು ಕರ್ನಾಟಕ ಶಾಸ್ತ್ರೀಯ ಸಂಗೀತದ ಸಂಸ್ಥಾಪಕರೆಂದು ಪ್ರಸಿದ್ಧರಾದವರು. ಪುರಂದರದಾಸರು ಶ್ರೀ ಹರಿಯ ಅನನ್ಯ ಭಕ್ತರಾಗಿದ್ದರು. ಪುರಂದರ ದಾಸರು ಹಾಗೂ ಕನಕದಾಸರನ್ನು ದಾಸ ಸಾಹಿತ್ಯದ ಅಶ್ವಿನಿ ದೇವತೆಗಳೆಂದೇ ಬಣ್ಣಿಸಲಾಗುತ್ತದೆ. ಸಮಾಜದಲ್ಲಿನ ಓರೆಕೋರೆಗಳನ್ನು ತಿದ್ದುತ್ತಾ ಪ್ರತಿಯೊಬ್ಬರೂ ಅರ್ಥಪೂರ್ಣ ಜೀವನ ನಡೆಸಲು ಹಾಗೂ ಪರಮಾತ್ಮನ ಮಹಿಮೆಗಳ ಬಗ್ಗೆ ತಿಳುವಳಿಕೆ ನೀಡಲು ಅನೇಕ ಪದಗಳನ್ನು ರಚಿಸಿದ್ದಾರೆ.

ಪುರಂದರದಾಸರ ಮೊದಲ ಹೆಸರು ಶ್ರೀನಿವಾಸ ನಾಯಕ, ತಂದೆ ವರದಪ್ಪನಾಯಕ, ತಾಯಿ ರುಕ್ಮಿಣಿ. ಪುರಂದರದಾಸರ ತಂದೆ ವರದಪ್ಪ ನಾಯಕ ಲೇವಾದೇವಿ ವೃತ್ತಿಯಲ್ಲಿದ್ದರು. ಇವರು ಕ್ರಿ.ಶ.1484 ರಲ್ಲಿ ಪುರಂದರಗಡದಲ್ಲಿ ಮಾಧ್ವ ದೇಶಸ್ಥ ಬ್ರಾಹ್ಮಣ ಜನಾಂಗದಲ್ಲಿ ಜನಿಸಿದರು.

ಪುರಂದರದಾಸರ ತಂದೆ ವರದಪ್ಪ ನಾಯಕರು ಒಬ್ಬ ಬಂಗಾರ,ಬೆಳ್ಳಿ ಮತ್ತು ವಜ್ರದ ಶ್ರೀಮಂತ ವ್ಯಾಪಾರಿ0ಯಾಗಿದ್ದರು. ಪುರಂದರ ದಾಸರೂ ಕೂಡ ಒಬ್ಬ ಶ್ರೀಮಂತ ಬಂಗಾರದ ಆಭರಣಗಳ ವ್ಯಾಪಾರಿ0ಯಾಗಿದ್ದರು. ಆದರೆ ಅವರು ಬಹಳ ಜಿಪುಣರಾಗಿದ್ದರು.

ಒಮ್ಮೆ, ವಿಠ್ಠಲ (ವಿಷ್ಣು) ಬಡ ಬ್ರಾಹ್ಮಣನ ವೇಷದಲ್ಲಿ ಶ್ರೀನಿವಾಸನ ನಾಯಕ ಅಂಗಡಿಗೆ ಬಂದು ಮಗನ ಉಪನಯನಕ್ಕೆ ಹಣ ಬೇಡಿದನಂತೆ. ಜಿಪುಣ ಶ್ರೀನಿವಾಸ ಪ್ರತಿ ದಿನವೂ ಮಾರನೆಯ ದಿನ ಬರಹೇಳುತ್ತ, ಆರು ತಿಂಗಳುಗಳ ಕಾಲ ಮುಂದೆ ಹಾಕಿದನು. ಕೊನೆಗೆ ಬ್ರಾಹ್ಮಣನ



ಕಾಟ ತಡೆಯಲಾರದೆ ಒಂದು ಸವಕಲು ನಾಣ್ಯವನ್ನು ಕೊಟ್ಟನು. ಮಾರನೇ ದಿನ ಅದೇ ಬ್ರಾಹ್ಮಣ ಶ್ರೀನಿವಾಸ ನಾಯಕರ ಮನೆಗೆ ಬಂದು ಅವರ ಹೆಂಡತಿ ಸರಸ್ವತಿಯ ಬಳಿ ತನ್ನ ಮಗನ ಉಪನಯನಕ್ಕಾಗಿ ಸಹಾಯ ಮಾಡಲು ತಿಳಿಸುತ್ತಾರೆ. ಸರಸ್ವತಿಯು ಮರುಕದಿಂದ ತನ್ನ ಬಳಿ ಯಾವುದೇ ಆಭರಣಗಳಿಲ್ಲ ಎಂದು ತಿಳಿಸಿದಾಗ, ಆಗ ಆ ಬ್ರಾಹ್ಮಣನು ಅವಳ ಬಳಿಯಿರುವ ಮೂಗುತಿಯನ್ನು ಕೊಡು ಎಂದು ಹೇಳಿದನು.

ಸರಸ್ವತಿಯು ಆ ಬ್ರಾಹ್ಮಣನಿಗೆ ತನ್ನ ಮೂಗುತಿಯನ್ನು ತೆಗೆದುಕೊಟ್ಟಳು. ಬ್ರಾಹ್ಮಣ ತಕ್ಷಣ ಮೂಗುತಿಯನ್ನು ಶ್ರೀನಿವಾಸನ ಅಂಗಡಿಗೆ ಒಯ್ದು ಅದನ್ನು ಅಡವಿಡಲು ಪ್ರಯತ್ನಿಸಿದನು. ಶ್ರೀನಿವಾಸ ಆ ಮೂಗುತಿಯನ್ನು ಗುರುತಿಸಿ, ಹಣ ತೆಗೆದುಕೊಂಡು ಹೋಗಲು ನಾಳೆ ಬರುವಂತೆ ಬ್ರಾಹ್ಮಣನಿಗೆ ತಿಳಿಸಿದ. ಅದನ್ನು ಡಬ್ಬಿಯಲ್ಲಿಟ್ಟು

> ವ್ಯಾಸರಾಜರಲ್ಲಿ ಶಿಷ್ಯತ್ವವನ್ನು ಸ್ವೀಕರಿಸಿದ ಪುರಂದರದಾಸರು ಅನೇಕ ಭಕ್ತಿ ಗೀತೆಗಳ ಮುಖಾಂತರ ಪ್ರತಿಯೊಬ್ಬ ಮನುಷ್ಯನು ಜೀವನದಲ್ಲಿ ವಿವಿಧ ಹಂತಗಳಲ್ಲಿ ಶ್ರೀ ಹರಿಯನ್ನು ಭಜಿಸಿ ತಮಗೆ ಎದುರಾಗುವ ಸವಾಲು, ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕು. ಭಗವಂತನ ನಾಮಸ್ಮರಣೆ ಮಾಡುತ್ತಾ ತಮ್ಮ ತಮ್ಮ ಕರ್ತವ್ಯಗಳನ್ನು ಶ್ರದ್ಧೆಯಿಂದ ಚಾಚೂ ತಪ್ಪದೇ ನಿರ್ವಹಿಸಬೇಕೆಂದು ತಿಳಿಸಿ ಹೇಳಿದ್ದಾರೆ. ಪುರಂದರ ದಾಸರು ಕ್ರಿ.ಶ.1565ರಲ್ಲಿ ಇಹಲೋಕ ತ್ಯಜಿಸಿದರು.

ತಕ್ಷಣ ಮನೆಗೆ ಬಂದು ಪತ್ನಿಯ ಬಳಿ ಮೂಗುತಿಯನ್ನು ತೋರಿಸಲು ಹೇಳಿದನು. ಹೆಂಡತಿಯು ತಕ್ಷಣವೇ ತರುತ್ತೇನೆಂದು ಒಳಗೆ ಹೋಗಿ, ಸ್ನಾನ ಕೊಠಡಿಯಲ್ಲಿ ವಿಷ ಕುಡಿಯುವ ಪ್ರಯತ್ನ ನಡೆಸಿದಾಗ ಅವಳ ವಿಷದ ಬಟ್ಟಲಿನೊಳಕ್ಕೆ ಮೇಲಿನಿಂದ ಮೂಗುತಿ ಬಿದ್ದಿತಂತೆ. ಅದನ್ನು ತಂದು ಶ್ರೀನಿವಾಸನಿಗೆ ಕೊಡುತ್ತಾಳೆ. ಅಂಗಡಿಗೆ ಹಿಂದಿರುಗಿ ಬಂದ ಶ್ರೀನಿವಾಸ ಡಬ್ಬಿಯನ್ನು ತೆಗೆದು ನೋಡಿದರೆ ಅಲ್ಲಿ ಇಟ್ಟಿದ್ದ ಮೂಗುತಿ ಮಾಯವಾಗಿತ್ತಂತೆ.

ಆಗ ಅವನಿಗೆ ಬಂದ ಬ್ರಾಹ್ಮಣ ಮತ್ತಾರೂ ಅಲ್ಲ, ತನ್ನನ್ನು ಪರೀಕ್ಷಿಸಲು ಸ್ವತಃ ಪರಮಾತ್ಮನಾದ ನಾರಾಯಣನೇ ಬ್ರಾಹ್ಮಣ ವೇಷದಲ್ಲಿ ಬಂದಿದ್ದನೆಂದು ಅರಿತುಕೊಳ್ಳುತ್ತಾನೆ. ಆಗ ಶ್ರೀನಿವಾಸನಿಗೆ ಜ್ಞಾನೋದಯವಾಯಿತು. ತನ್ನ ಶ್ರೀಮಂತಿಕೆಯನ್ನು ತೊರೆದು ವೈರಾಗ್ಯ ಉಂಟಾಗಿ ಹರಿದಾಸನಾಗುವ ನಿರ್ಧಾರ ತೆಗೆದುಕೊಂಡನು. ಪರಮಾತ್ಮನ ಸೇವೆಗಾಗಿ ಹರಿದಾಸರಾಗಲು ದಾರಿ ತೋರಿಸಿದ್ದರ ಕುರಿತು ಕೃತಜ್ಞತೆಗಾಗಿ ತಮ್ಮ ಹೆಂಡತಿಯ ಜ್ಞಾಪಕಾರ್ಥ ಆದದ್ದೆಲ್ಲ ಒಳಿತೇ ಆಯಿತು ಎಂಬ ಕೀರ್ತನೆಯನ್ನು ಪುರಂದರದಾಸರು ರಚಿಸಿದ್ದಾರೆ. ನಂತರ ಶ್ರೀನಿವಾಸ ನಾಯಕ 'ಪುರಂದರದಾಸ' ಎಂಬ ಹೆಸರನ್ನು ಪಡೆದರು.

ಪುರಂದರ ದಾಸರು ಅನೇಕ ಕೀರ್ತನೆಗಳು, ಮುಂಡಿಗೆಗಳು, ಭಕ್ತಿಗೀತೆ, ಸುಳಾದಿಗಳನ್ನು ರಚಿಸಿದ್ದು ಅವರ ಸಾಹಿತ್ಯವೆಲ್ಲ ಪುರಂದರ ವಿಠಲನಿಗೆ ಸಮರ್ಪಿಸಲಾಗಿದೆ. ಭಕ್ತಿ ಮಾರ್ಗವನ್ನು ಜನಸಮಾನ್ಯರಿಗೆ ಪರಿಚಯಿಸುವ ಉದ್ದೇಶ ಹೊಂದಿದ್ದ ಇವರು ಸುಮಾರು 4,75,000 ಹಾಡುಗಳನ್ನು ರಚಿಸಿದ್ದಾರೆ. ಪುರಂದರದಾಸರು ನಾರದರ ಅಂಶವೆಂದೂ ಹೇಳಲಾಗುತ್ತದೆ.

ಜ್ಞಾನ, ಭಕ್ತಿ, ವೈರಾಗ್ಯ ಮೂರ್ತಿಯಾದ ಪುರಂದರದಾಸರು ರಚಿಸಿದ ಭಕ್ತಿಗೀತೆ, ಸುಳಾದಿ, ಕೀರ್ತನೆಗಳ ಸಂದೇಶಗಳನ್ನು ಇಂದಿನ ಮನುಕುಲ ಅನುಸರಿಸುವ ಅವಶ್ಯತೆ ಇದೆ. ತನ್ಮೂಲಕ ಪರಮಾತ್ಮನ ಅನುಗ್ರಹ ಪಡೆದು ಜೀವನದಲ್ಲಿ ನೆಮ್ಮದಿ ಕಂಡುಕೊಳ್ಳಬಹುದಾಗಿದೆ.

**– ಅಂಜನಾ ರಾಘವೇಂದ್ರ ಕುಬೇರ.**
ಗದಗ.

# ಗಾಣಿಗ ಅಭಿವೃದ್ಧಿ ನಿಗಮ ಅನುಷ್ಠಾನವಾಗಲಿ

**■ವಿಜಯಸಾಕ್ಷಿ ಸುದ್ದಿ, ಗದಗ**

ನಗರದ ಮಹಾತ್ಮ ಗಾಂಧಿ ವೃತ್ತದಲ್ಲಿ ಸುವರ್ಣ ಕರ್ನಾಟಕ ಗಾಣಿಗ ಮಹಾಸಭಾ ರಾಜ್ಯ ಯುವ ಘಟಕದ ವತಿಯಿಂದ ರಾಜ್ಯ ಸರ್ಕಾರ ಗಾಣಿಗ ಅಭಿವೃದ್ಧಿ ನಿಗಮ ಮಂಡಳಿಗೆ 1 ಸಾವಿರ ಕೋಟಿ ರೂ. ಅನುದಾನ ಮಂಜೂರಾತಿಗೆ ಆಗ್ರಹಿಸಿ ಬೃಹತ್ ಪಂಜಿನ ಮೆರವಣಿಗೆ ನಡೆಸಿದರು.

ಈ ಪ್ರತಿಭಟನೆಯನ್ನುದ್ದೇಶಿಸಿ ಮಹಾಸಭಾದ ಯುವ ಘಟಕದ ರಾಜ್ಯಾಧ್ಯಕ್ಷ ಮಂಜುನಾಥ್ ಪಿ.ಪರ್ವತಗೌಡ್ರ ಮಾತನಾಡಿ, ಗಾಣಿಗ ಸಮಾಜ ಅತ್ಯಂತ ಹಿಂದುಳಿದ ಸಮಾಜವಾಗಿದ್ದು, ವ್ಯವಸಾಯ ಮತ್ತು ಎಣ್ಣೆ ತೆಗೆಯುವುದು ಉದ್ಯೋಗವಾಗಿದೆ.




ಈ ಹಿಂದುಳಿದ ಸಮಾಜವನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ ನಿಗಮ ಮಂಡಳಿಯನ್ನು ಸರಕಾರ ನೀಡಬೇಕೆಂಬ ಹೋರಾಟಕ್ಕೆ ಮಣಿದು ಅಂದಿನ ಸರ್ಕಾರ ಗಾಣಿಗ ಅಭಿವೃದ್ಧಿ ನಿಗಮ ಮಂಡಳಿಯನ್ನು ಜಾರಿಗೆ ತಂದಿತ್ತು. ಆದರೆ, ನಿಗಮ ಮಂಡಳಿ ಈವರೆಗೂ ಅನುಷ್ಠಾನಗೊಂಡಿಲ್ಲ ಎಂದು ಆರೋಪಿಸಿದರು.

ಶಿವಣ್ಣ ಹುಡೆದ ಮಾತನಾಡಿ, ಗಾಣಿಗ ಸಮಾಜದ ಹೆಮ್ಮೆಯ ನಾಯಕರು, ಮಾಜಿ ಉಪಮುಖ್ಯಮಂತ್ರಿ ಲಕ್ಷ್ಮಣ ಸವದಿ ಪಟ್ಟ ಪರಿಶ್ರಮ ಮತ್ತು ಅವರ ಪ್ರಭಾವದಿಂದ ಈಗಿನ ಸರಕಾರಕ್ಕೆ 25–30 ಕ್ಷೇತ್ರದಲ್ಲಿ ಕಾಂಗ್ರೆಸ್ ಗೆಲ್ಲಲು ಸಾಧ್ಯವಾಗಿದೆ. ಹೀಗಾಗಿ ನಮ್ಮ ನಾಯಕರಿಗೆ ಕೂಡಲೇ ಉಪಮುಖ್ಯಮಂತ್ರಿ ಸ್ಥಾನವನ್ನ ನೀಡಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಸುರೇಶ ಮುಳಗುಂದ, ಮಲ್ಲಿಕಾರ್ಜುನ ಕೊರಕನವರ, ಮಂಜುನಾಥ ಬಿಳೆಯಲಿ, ಈಶ್ವರ ಕಾನಗೌಡ್ರ, ನಾಗರಾಜ ಹನಮಂತಗೌಡ್ರ, ಸಂಜು ಬೆನಹಾಳ, ಪರಸು ಬನ್ನೂರ, ಮುತ್ತು ಬಿಳೆಲಿ, ಬಸವರಾಜ ಹುಡೇದ, ಬಸವರಾಜ ಮುಳ್ಳಾಳ, ಗುರುರಾಜ ಕಲಕೇರಿ, ಉದಯ ಧಳವಾಯಿ, ಪಾಂಡು ಗಡಾದ, ಪ್ರಕಾಶ ಬಿಂದರಕುಂದಿ, ಸುನೀಲ ಹೊಣ್ಣಪ್ಪನವರ, ರಮೇಶ ಹನಮಂತಗೌಡ್ರ, ಜಗದೀಶ್ ಕವಲೂರ ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

# ದಾಸವಾಣಿ ಕಾರ್ಯಕ್ರಮ ನಾಳೆ

**■ವಿಜಯಸಾಕ್ಷಿ ಸುದ್ದಿ, ಗದಗ**

ದಾಸಶ್ರೇಷ್ಠ ಶ್ರೀ ಪುರಂದರ ದಾಸರ ಪುಣ್ಯತಿಥಿ ಹಾಗೂ ಶ್ರೀ ವೀರನಾರಾಯಣ ಯುವಕ ಮಂಡಳ ಮತ್ತು ಮಹಾಲಕ್ಷ್ಮೀ ಯುವತಿ ಮಂಡಳದ ವಾರ್ಷಿಕೋತ್ಸವ ಕಾರ್ಯಕ್ರಮ ಫೆ. 9ರಂದು ನಗರದ ಶ್ರೀ ವೀರನಾರಾಯಣ ದೇವಸ್ಥಾನದ ಆವರಣದಲ್ಲಿ ಜರುಗಲಿದೆ.

ಬೆಳಿಗ್ಗೆ 8 ಗಂಟೆಗೆ ಪುರಂದರ ದಾಸರ ಭಾವಚಿತ್ರದ ಪೂಜೆ ಜರುಗಲಿದ್ದು, ಸಾಯಂಕಾಲ 5 ಗಂಟೆಗೆ ಶೃತಿ ಕೆರೂರ ಹಾಗೂ ಸಂಗಡಿಗರಿಂದ ದಾಸವಾಣಿ ಕಾರ್ಯಕ್ರಮ ಆಯೋಜಿಸಲಾಗಿದೆ. ಪಂ. ಶ್ರೀ ವರದಾಚಾರ್ಯ ಹುನಗುಂದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು.



ಸದ್ಭಕ್ತರು, ಆಸಕ್ತರು ಪಾಲ್ಗೊಳ್ಳುವಂತೆ ಶ್ರೀ ವೀರನಾರಾಯಣ ಯುವಕ ಮಂಡಳ, ಮಹಾಲಕ್ಷ್ಮೀ ಯುವತಿ ಮಂಡಳ ಮತ್ತು ವಿವಿಧ ಭಜನಾ ಮಂಡಳಿಗಳ ಪರವಾಗಿ ಕೋರಲಾಗಿದೆ.

# ಜೈ ಹೋ ಕರ್ನಾಟಕ ಪರಿವರ್ತನಾ ವೇದಿಕೆ ಪದಾಧಿಕಾರಿಗಳ ಆಯ್ಕೆ



**■ವಿಜಯಸಾಕ್ಷಿ ಸುದ್ದಿ, ಗದಗ**

ಜೈ ಹೋ ಕರ್ನಾಟಕ ಪರಿವರ್ತನಾ ವೇದಿಕೆಯ ಕವಲೂರು ಗ್ರಾಮ ಘಟಕವನ್ನು ರಚಿಸಲಾಯಿತು. ಈ ಸಂದರ್ಭದಲ್ಲಿ ವೇದಿಕೆಯ ರಾಜ್ಯಾಧ್ಯಕ್ಷ ಇರ್ಫಾನ್ ಈ.ಡಂಬಳ ಕವಲೂರ್ ಗ್ರಾಮ ಘಟಕದ ಅಧ್ಯಕ್ಷರನ್ನಾಗಿ ಪ್ರವೀಣ ಗುಡಿ, ಗೌರವಾಧ್ಯಕ್ಷರನ್ನಾಗಿ ಕಲ್ಲಯ್ಯ ಮೂಲಿಮನಿ ಉಪಾಧ್ಯಕ್ಷರನ್ನಾಗಿ ಈರಪ್ಪ ಬಂಡಿ, ಪ್ರಧಾನ ಕಾರ್ಯದರ್ಶಿಗಳನ್ನಾಘಿ ಗಣೇಶ್ ಮ್ಯಾಗೇರಿ, ಸುಭಾನ್ ಸಾಬ್ ತಹಸೀಲ್ದಾರ್, ಖಜಾಂಚಿಯಾಗಿ ನಿಂಗಪ್ಪ ಹೊಸಉಪ್ಪಾರ್, ಸದಸ್ಯರನ್ನಾಗಿ ಅಶೋಕ್ ಅಂದ್ರಾಳ್, ಸಂತೋಷ್ ಬಂಡಿ, ಮಲ್ಲಪ್ಪ ಭೀಮಪ್ಪ ಸಿಗ್ನೇಕೊಪ್ಪರನ್ನು ಆಯ್ಕೆ ಮಾಡಿದರು.

ವೇದಿಕೆಯ ಜಿಲ್ಲಾಧ್ಯಕ್ಷ ಮೊಮ್ಮದ್ ರಫೀಕ್ ಧಾರವಾಡ ಮಾತನಾಡಿ, ಸಂಘದ ಸಿದ್ಧಾಂತವನ್ನು ಪಾಲಿಸಿ, ನಮ್ಮ ಸಂಘಟನೆಯ ಬಲ ಹೆಚ್ಚಿಸೋಣ ಎಂದರು.

ಈ ಸಂದರ್ಭದಲ್ಲಿ ಶಿರಹಟ್ಟಿ ತಾಲೂಕು ಮಹಿಳಾ ಅಧ್ಯಕ್ಷರಾದ ಕೌಸರ್‌ಬಾನು, ಭೀಮಸಿ ಪೂಜಾರಿ, ಕೆ.ಬಿ. ಕುಡುಗಂಟಿ, ರಮೇಶ್ ಬೆಳೆಯಲಿ, ಈಶ್ವರ್ ಲಕ್ಷ್ಮೇಶ್ವರ ಮುಂತಾದವರು ಉಪಸ್ಥಿತರಿದ್ದರು.

# ಕಾರ್ಯಕರ್ತರಿಗೂ ಮನ್ನಣೆ ನೀಡಿ

**■ವಿಜಯಸಾಕ್ಷಿ ಸುದ್ದಿ, ಕೊಪ್ಪಳ**

ಪಕ್ಷ ಅಧಿಕಾರದಲ್ಲಿ ಇಲ್ಲದಿದ್ದಾಗ ಪ್ರಾಮಾಣಿಕವಾಗಿ ದುಡಿದ ನಿಷ್ಠಾವಂತ, ವಿದ್ಯಾವಂತ ಕಾರ್ಯಕರ್ತರಿಗೆ ಅಧಿಕಾರದಲ್ಲಿರುವಾಗ ಅವಕಾಶ ನೀಡಿದರೆ ಮಾತ್ರ ಪಕ್ಷದ ಬಲವರ್ಧನೆ ಸಾಧ್ಯ ಎಂದು ಜಿಲ್ಲಾ ಮಹಿಳಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜ್ಯೋತಿ ಎಂ.ಗೊಂಡಬಾಳ ಹೇಳಿದರು.

ಜಿಲ್ಲೆಯ ಗಂಗಾವತಿಗೆ ಖಾಸಗಿ ಕಾರ್ಯಕ್ರಮಕ್ಕೆ ಆಗಮಿಸಿದ್ದ ಕಾಂಗ್ರೆಸ್ ಹಿರಿಯ ಶಾಸಕ ಮತ್ತು ವಿಧಾನಸಭೆ ಸ್ಪೀಕರ್ ಯು.ಟಿ. ಖಾದರ್ ಅವರನ್ನು ಮಾಜಿ ಸಚಿವ ಇಕ್ಬಾಲ್ ಅನ್ಸಾರಿ ಅವರ ಮನೆಯಲ್ಲಿ ಭೇಟಿಯಾಗಿ ಮನವಿ ಮಾಡಿದ ಅವರು, ಪಕ್ಷ ಅಧಿಕಾರಕ್ಕೆ ಬಂದಿದೆ, ಪಕ್ಷದ



ಶಾಸಕರಿಗೆ ಬೆಲೆ ಬಂದಿದೆ. ಈಗ ಕಾರ್ಯಕರ್ತರಿಗೂ ಅಧಿಕಾರ ಕೊಟ್ಟರೆ ಮುಂದಿನ ಲೋಕಸಭೆ, ಜಿಲ್ಲಾ, ತಾಲೂಕು ಪಂಚಾಯಿತಿ ಚುನಾವಣೆಗಳಲ್ಲಿ ಹೆಚ್ಚಿನ ಸ್ಥಾನ ಗೆಲ್ಲಲು ಸಾಧ್ಯವಾಗುತ್ತದೆ. ನಿಷ್ಠಾವಂತರಿಗೆ ಬೆಲೆ ಸಿಕ್ಕಾಗ ಪಕ್ಷದ ಜೊತೆಗೆ ಹೆಚ್ಚು ಹೆಚ್ಚು ಜನರು ಗುರುತಿಸಿಕೊಳ್ಳಲು ಇಚ್ಛಿಸುತ್ತಾರೆ ಎಂದು ವಿನಂತಿಸಿದರು.

ಇದೇ ವೇಳೆ ರಾಜ್ಯದಾದ್ಯಂತ ಡಾ. ಪುಷ್ಪಾ ಅಮರನಾಥ ಅವರ ನೇತೃತ್ವದಲ್ಲಿ ಮಹಿಳಾ ಘಟಕವೂ ಸಹ ಸಕ್ರಿಯವಾಗಿ ಉತ್ತಮ ಕೆಲಸ ಮಾಡಿದ್ದು, ಹೆಚ್ಚಿನ ಮಹಿಳಾ ಕಾರ್ಯಕರ್ತರಿಗೂ ನಾಮನಿರ್ದೇಶನಗಳಲ್ಲಿ ಅವಕಾಶ ಕೊಡುವಂತೆ ಮನವಿ ಸಲ್ಲಿಸಿದರು.

ಯು.ಟಿ. ಖಾದರ್ ಅವರು ಅತ್ಯಂತ ತಾಳ್ಮೆಯಿಂದ ಮನವಿಯನ್ನು ಆಲಿಸಿ, ಕಾರ್ಯಕರ್ತರಿಗೆ ಮನ್ನಣೆ ಕೊಡುವ ಕೆಲಸವಾಗುತ್ತದೆ ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಮಹಿಳಾ ಕಾಂಗ್ರೆಸ್ ಉಪಾಧ್ಯಕ್ಷೆ ರಜಿಯಾ ಮನಿಯಾರ, ಜಿಲ್ಲಾ ಮೈನಾರಿಟಿ ಸೆಲ್ ಅಧ್ಯಕ್ಷ ಸಲೀಂ ಅಳವಂಡಿ, ಜಿಲ್ಲಾ ಕಾರ್ಮಿಕ ಘಟಕ ಪ್ರಧಾನ ಕಾರ್ಯದರ್ಶಿ ಶ್ರೀನಿವಾಸ ಪಂಡಿತ್, ಎಸ್.ಟಿ. ಸೆಲ್ ತಾಲೂಕಾಧ್ಯಕ್ಷ ಮಂಜುನಾಥ ಗೊಂಡಬಾಳ, ರಾಜು ಜವಳಿ ಮುಂತಾದವರಿದ್ದರು.

## ನರೇಗಲ್ಲದಲ್ಲಿ ಗದಗ ಜಿಲ್ಲಾ ಮಟ್ಟದ 'ಪ್ರೋ ಕಬಡ್ಡಿ ಸೀಸನ್–1

# ಕಬಡ್ಡಿ ಪಂದ್ಯಾವಳಿ ಫೆ.23ರಿಂದ



**■ವಿಜಯಸಾಕ್ಷಿ ಸುದ್ದಿ, ನರೇಗಲ್ಲ**

ಸ್ಥಳೀಯ ಕೋಡಿಕೊಪ್ಪದ ಹಠಯೋಗಿ ಹುಚ್ಚೀರೇಶ್ವರ ಮಠದ ಜಾತ್ರಾಮಹೋತ್ಸವದ ಅಂಗವಾಗಿ ಕರ್ನಾಟಕ ರಾಜ್ಯ ಅಮೆಚೂರ್ ಕಬಡ್ಡಿ, ಗದಗ ಜಿಲ್ಲಾ ಅಮೆಚೂರ್ ಕಬಡ್ಡಿ ಅಸೋಷಿಯೇಷನ್, ಮಿಥುನ್ ಜಿ.ಪಾಟೀಲ ಅಭಿಮಾನಿಗಳ ಬಳಗ ಹಾಗೂ ರೇಣುಕಾದೇವಿ ಸ್ಪೋರ್ಟ್ಸ್ ಕ್ಲಬ್ ಇವರ ಆಶ್ರಯದಲ್ಲಿ ಪಟ್ಟಣದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಫೆ.23ರಿಂದ 25ರವರೆಗೆ ಗದಗ ಜಿಲ್ಲಾ ಮಟ್ಟದ 'ಪ್ರೋ ಕಬಡ್ಡಿ ಸೀಸನ್–1' ಪಂದ್ಯಾವಳಿಯನ್ನು ಆಯೋಜಿಸಲಾಗಿದೆ.

ಮ್ಯಾಟ್ ಮೇಲೆ ಹೊನಲು ಬೆಳಕಿನ ಕಬಡ್ಡಿಯನ್ನು ಆಯೋಜಿಸಲಾಗಿದ್ದು, ವೀಕ್ಷಣೆಗಾಗಿ ಸುತ್ತಲೂ ಗ್ಯಾಲರಿ ವ್ಯವಸ್ಥೆಯನ್ನು ಮಾಡಲಾಗಿದೆ. ಪ್ರಥಮ ಬಹುಮಾನ 75 ಸಾವಿರ ರೂ, ದ್ವಿತೀಯ ಬಹುಮಾನ 50 ಸಾವಿರ ರೂ, ತೃತೀಯ ಬಹುಮಾನ 30 ಸಾವಿರ ರೂ, ಚತುರ್ಥ ಬಹುಮಾನ 20 ಸಾವಿರ ರೂ. ನೀಡಲಾಗುತ್ತದೆ. ಗದಗ ಜಿಲ್ಲೆಯ ಕಬಡ್ಡಿ ಆಟಗಾರರು ಉತ್ತಮ ಆಡಳಿತಗಾರ, ಉತ್ತಮ ಹಿಡಿತಗಾರ, ಉತ್ತಮ ಆಟಗಾರ ವಿಭಾಗದಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ–8951641121, 9886427170, 9686094075, 8495090772, 9980901903 ಸಂಪರ್ಕಿಸಬಹುದಾಗಿದೆ ಎಂದು ರೇಣುಕಾದೇವಿ ಸ್ಪೋರ್ಟ್ಸ್ ಕ್ಲಬ್ ಸದಸ್ಯ ಸದ್ದಾಂ ನಶೇಖಾನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಛತ್ರಪತಿ ಶಿವಾಜಿ ಜಯಂತಿ: ಇಂದು ಸಂಜೆ ಪೂರ್ವಭಾವಿ ಸಭೆ

**■ವಿಜಯಸಾಕ್ಷಿ ಸುದ್ದಿ, ಗದಗ**

ಸರ್ಕಾರದ ಆದೇಶದನ್ವಯ ಫೆಬ್ರವರಿ 19ರಂದು ಛತ್ರಪತಿ ಶಿವಾಜಿ ಜಯಂತಿ ನಿಮಿತ್ತ ಫೆಬ್ರವರಿ 9ರಂದು ಸಂಜೆ 5.00 ಗಂಟೆಗೆ ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಪೂರ್ವಭಾವಿ ಸಭೆ ಕರೆಯಲಾಗಿದೆ.

ಸಭೆಗೆ ಹಾಜರಾಗಿ ಸಲಹೆ/ಅಭಿಪ್ರಾಯ ನೀಡಬೇಕೆಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಉಮೇಶ ಹೊಸಳ್ಳಿ ರಾಷ್ಟ್ರಮಟ್ಟಕ್ಕೆ ಆಯ್ಕೆ

**■ವಿಜಯಸಾಕ್ಷಿ ಸುದ್ದಿ, ಗದಗ**

ಬೆಂಗಳೂರಿನಲ್ಲಿ ನಡೆದ ರಾಜ್ಯ ಮಟ್ಟದ ಪೊಲೀಸ್ ಕರ್ತವ್ಯ ಕೂಟ–2023–24ರಲ್ಲಿ ಕಂಪ್ಯೂಟರ್ ಅವೇರ್‌ನೆಸ್ ಸ್ಪೀಡ್ ಟೆಸ್ಟ್‌ನಲ್ಲಿ ಗದಗ ಶಹರ ಪೊಲೀಸ್ ಠಾಣೆಯ ಹೆಡ್ ಕಾನ್ಸ್‌ಟೇಬಲ್ (ಎಚ್‌ಸಿ–442) ಉಮೇಶ ಎನ್.ಹೊಸಳ್ಳಿ ಮೂರನೇ ಬಾರಿಗೆ ಪ್ರಥಮ ಸ್ಥಾನ ಪಡೆದುಕೊಂಡಿದ್ದಾರೆ.



ರಾಜ್ಯಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದುಕೊಂಡು ರಾಷ್ಟ್ರಮಟ್ಟಕ್ಕೆ ಆಯ್ಕೆಯಾದ ಉಮೇಶ ಹೊಸಳ್ಳಿ ಅವರನ್ನು ಬೆಂಗಳೂರಿನ ಪೊಲೀಸ್ ಗಣಕ ವಿಭಾಗದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಡಾ.ಪ್ರಣವ ಮಹಾಂತಿ, ಬೆಂಗಳೂರು ನಗರ ಎಫ್‌ಎಸ್‌ಎಲ್ ನಿರ್ದೇಶಕರಾದ ಡಾ.ದಿವ್ಯ ಗೋಪಿನಾಥ ಹಾಗೂ ಬೆಂಗಳೂರಿನ ಎಸ್.ಸಿ.ಆರ್.ಬಿ ಸೂಪರಿಡೆಂಡೆಂಟ್ ಆಫ್ ಪೊಲೀಸ್ ಲಕ್ಷ್ಮಣ ನಿಂಬರ್ಗಿ ಅವರು ಪದಕ ಹಾಗೂ ಪ್ರಮಾಣ ಪತ್ರ ನೀಡಿ ಗೌರವಿಸಿದರು. ಗದುಗಿನ ಕೀರ್ತಿಯನ್ನು ಹೆಚ್ಚಿಸಿದ ಉಮೇಶ ಅವರಿಗೆ ಗದಗ ಎಸ್ಪಿ, ಡಿಎಸ್ಪಿ, ಗದಗ ಶಹರ ಸಿಪಿಐ, ಪಿಎಸ್‌ಐ ಅವರು ಅಭಿನಂದಿಸಿದ್ದಾರೆ.

## ರಾಜ್ಯ ಮಟ್ಟದಲ್ಲಿ ಜಿಮ್ಸ್ ವಿದ್ಯಾರ್ಥಿಗಳ ಸಾಧನೆ

■ವಿಜಯಸಾಕ್ಷಿ ಸುದ್ದಿ, ಗದಗ

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಬೆಂಗಳೂರು, ಸ್ನಾತಕೋತ್ತರ ವೈದ್ಯರ ಪರೀಕ್ಷೆಯಲ್ಲಿ ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಅರವಳಿಕೆ ವಿಭಾಗದ ಸ್ನಾತಕೋತ್ತರ ವಿದ್ಯಾರ್ಥಿನಿ ಡಾ. ಅನಘ ಎಸ್ ರಾಜ್ಯಕ್ಕೆ ಪ್ರಥಮ ರ‍್ಯಾಂಕ್, (ಸ್ವರ್ಣ ಪದಕ), ಶಸ್ತ್ರ ಚಿಕಿತ್ಸಾ ವಿಭಾಗದ ಸ್ನಾತಕೋತ್ತರ ವಿದ್ಯಾರ್ಥಿನಿ ಡಾ. ನಿವೇದಾ ಬಿ.ಆರ್ ರಾಜ್ಯಕ್ಕೆ ಪ್ರಥಮ ರ‍್ಯಾಂಕ್, (ಸ್ವರ್ಣ ಪದಕ) ಮತ್ತು ಮನೋವೈದ್ಯಕೀಯ ವಿಭಾಗದ ಸ್ನಾತಕೋತ್ತರ ವಿದ್ಯಾರ್ಥಿನಿ ಡಾ. ಅಶಿತ್.ಆರ್ ರಾಜ್ಯಕ್ಕೆ ಹತ್ತನೇ ರ‍್ಯಾಂಕ್ ಪಡೆದು ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ ಮಹಾವಿದ್ಯಾಲಯದ ಕೀರ್ತಿಯನ್ನು ಹೆಚ್ಚಿಸಿದ್ದಾರೆ.

ಸಾಧಕ ವಿದ್ಯಾರ್ಥಿಗಳನ್ನು ಸಚಿವ ಡಾ. ಎಚ್.ಕೆ. ಪಾಟೀಲ, ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಸಚಿವ ಡಾ. ಶರಣಪ್ರಕಾಶ ಪಾಟೀಲ, ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ನಿರ್ದೇಶಕ ಡಾ. ಬಸವರಾಜ ಪಿ.ಬೊಮ್ಮನಹಳ್ಳಿ, ಪ್ರಾಂಶುಪಾಲ ಡಾ. ರಾಜು ಜಿ.ಎಮ್, ಅರವಳಿಕೆ ವಿಭಾಗದ ಪ್ರಾಧ್ಯಾಪಕರು ಹಾಗೂ ವಿಭಾಗದ ಮುಖ್ಯಸ್ಥರಾದ ಡಾ. ವಿನಾಯಕ ಪಂಚಗಾರ, ಶಸ್ತ್ರ ಚಿಕಿತ್ಸಾ ವಿಭಾಗದ ಪ್ರಾಧ್ಯಾಪಕರು ಹಾಗೂ ವಿಭಾಗದ ಮುಖ್ಯಸ್ಥರಾದ ಡಾ. ಜ್ಯೋತಿ ಕರೇಗೌಡರ, ಮನೋವೈದ್ಯಕೀಯ ವಿಭಾಗದ ಪ್ರಾಧ್ಯಾಪಕರು ಹಾಗೂ ವಿಭಾಗದ ಮುಖ್ಯಸ್ಥರಾದ ಡಾ. ಸೋಮಶೇಖರ ಬಿಜ್ಜಳ ಮತ್ತು ಸಂಸ್ಥೆಯ ಎಲ್ಲಾ ಬೋಧಕ-ಬೋಧಕೇತರ ಸಿಬ್ಬಂದಿಗಳು ಅಭಿನಂದಿಸಿದ್ದಾರೆ.

## ಜೆಡಿಎಸ್ ಉಸ್ತುವಾರಿಯಾಗಿ ಮುಧೋಳ

■ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ



ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಜೆಡಿಎಸ್ ಜಿಲ್ಲಾಧ್ಯಕ್ಷ ಮಕ್ತುಂಸಾಬ ಮುಧೋಳ ಅವರನ್ನು ಬಾಗಲಕೋಟೆ ಹಾಗೂ ಹಾವೇರಿ ಲೋಕಸಭಾ ಕ್ಷೇತ್ರಗಳ ಪಕ್ಷದ ಉಸ್ತುವಾರಿಯನ್ನಾಗಿ ನೇಮಕ ಮಾಡಿ ರಾಜ್ಯಾಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಆದೇಶ ಹೊರಡಿಸಿದ್ದಾರೆ.

### 'ವೈವಿಧ್ಯಮಯ ಭಾರತ-ವಿಶಿಷ್ಟ ಗದಗ' ಕಾರ್ಯಕ್ರಮದಲ್ಲಿ ಡಾ. ಮಹೇಶ ನಾಲವಾಡ ಅಭಿಪ್ರಾಯ

# ಗದಗ ಜಿಲ್ಲೆಯಿಂದ ದೇಶಕ್ಕೆ ವಿಶಿಷ್ಟ ಕೊಡುಗೆ






■ವಿಜಯಸಾಕ್ಷಿ ಸುದ್ದಿ, ಗದಗ

10 ಸಾವಿರ ವರ್ಷಗಳ ಧಾರ್ಮಿಕ, ಐತಿಹಾಸಿಕ, ಸಾಂಸ್ಕೃತಿಕ ಇತಿಹಾಸ ಈ ದೇಶಕ್ಕಿದೆ. ಅನೇಕ ಮತ-ಪಂಥ, ಬಣ್ಣ-ಭಾಷೆಗಳ ಜನರಿಗೆ ನೆಲೆ ನೀಡಿದೆ. ಇಂತಹ ವೈವಿಧ್ಯಮಯ ಭಾರತದಲ್ಲಿ ಗದಗ ಜಿಲ್ಲೆಯೂ ಅಷ್ಟೇ ವೈವಿಧ್ಯಮಯವಾಗಿದೆ ಎಂದು ಖ್ಯಾತ ವೈದ್ಯರಾದ ಡಾ. ಮಹೇಶ ನಾಲವಾಡ ಅಭಿಪ್ರಾಯಪಟ್ಟರು.

ದಿ ಕ್ಯಾನವಾಸ್ ಆರ್ಟ್ಸ್ ವತಿಯಿಂದ ನಗರದ ಕ್ಲಾರ್ಕ್ ಇನ್ ಹೋಟೆಲ್‌ನಲ್ಲಿ ಹಮ್ಮಿಕೊಂಡಿದ್ದ 'ವೈವಿಧ್ಯಮಯ ಭಾರತ-ವಿಶಿಷ್ಟ ಗದಗ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಔಷಧಿಯ ಗುಣಗಳಿಂದ ಕೂಡಿರುವ ಇಲ್ಲಿನ ರಮಣೀಯ ಕಪ್ಪತಗುಡ್ಡ, ಕಪ್ಪು ಮತ್ತು ಕೆಂಪು ಎರಡೂ ಮಣ್ಣಿನಿಂದ ಕೂಡಿದ ಫಲವತ್ತಾದ ಭೂಮಿಯಾಗಿದೆ. ಕುಮಾರವ್ಯಾಸ, ಚಾಮರಸರಂತ ಶ್ರೇಷ್ಠ ಕವಿಗಳಿಗೆ ಜನ್ಮಸ್ಥಳ, ಐತಿಹಾಸಿಕ ವೀರನಾರಾಯಣ ದೇವಸ್ಥಾನ, ರಾಷ್ಟ್ರಕೂಟರು, ಚಾಲುಕ್ಯರು ಸೇರಿದಂತೆ ಅನೇಕ ರಾಜಮನೆತನಗಳ ಆಳ್ವಿಕೆ, ಮುದ್ರಣ ನಗರಿ ಎಂಬ ಬಿರುದಿನೊಂದಿಗೆ ಕೃಷಿಯ ಮೂಲಕವೂ ದೇಶಕ್ಕೆ ಅನೇಕ ಕೊಡುಗೆಗಳನ್ನು ನೀಡಿದೆ.

ಶಿವಶರಣೆ ಇಟಗಿಯ ಶ್ರೀ ಭೀಮಾಂಬಿಕಾ ದೇವಿ, ಶ್ರೀ ಪುಟ್ಟರಾಜ ಗವಾಯಿಗಳು ಸೇರಿದಂತೆ ಭಾರತ ರತ್ನ ಪಂ. ಭೀಮಸೇನ್ ಜೋಶಿ, ಪದ್ಮಶ್ರೀ ಪಂ. ವೆಂಕಟೇಶ ಕುಮಾರ, ಖ್ಯಾತ ಕ್ರಿಕೆಟಿಗ ಸುನಿಲ್ ಜೋಶಿ ಸೇರಿದಂತೆ ಅನೇಕರು ಈ ಜಿಲ್ಲೆಯ ಕೀರ್ತಿ ಹೆಚ್ಚಿಸಿದ್ದಾರೆ. ಉದ್ಯಮದ ಮೂಲಕವೂ ಗದಗ ಜಿಲ್ಲೆ ದೇಶಕ್ಕೆ ಅನೇಕ ಕೊಡುಗೆಗಳನ್ನು ನೀಡಿದೆ ಎಂದು ಡಾ. ಮಹೇಶ ನಾಲವಾಡ ವಿವರಿಸಿದರು.

'ನವಭಾರತದ ಅಭಿವೃದ್ಧಿ ಮತ್ತು ಅರ್ಥಶಾಸ್ತ್ರ' ವಿಷಯದ ಕುರಿತು ಮಾತನಾಡಿದ ಖ್ಯಾತ ಲೆಕ್ಕ ಪರಿಶೋಧಕ ಶೇಷಗಿರಿ ಕುಲಕರ್ಣಿ, ಭಾರತ 6ನೇ ಶತಮಾನದಿಂದಲೇ ಮೊಘಲ್‌ರು, ಬ್ರಿಟಿಷರು, ಡಚ್ಚರ ಅನೇಕ ದಾಳಿಗಳನ್ನು ಎದುರಿಸಿ ತನ್ನ ಸಂಪತ್ತನ್ನು ಕಳೆದುಕೊಳ್ಳುತ್ತಾ ಬಂದರೂ ಮತ್ತೆ ಜಗತ್ತಿನ 5ನೇ ಅತಿದೊಡ್ಡ ಆರ್ಥಿಕತೆಯಾಗಿ ಬೆಳೆದಿರುವುದು ಬರಲಿರುವ ದಿನಗಳಲ್ಲಿ ಜಗತ್ತಿಗೆ ಭಾರತದ ಶಕ್ತಿಯ ಪರಿಚಯವಾಗಲಿದೆ ಎಂದರು.

ಕಾರ್ಯಕ್ರಮದಲ್ಲಿ ಹಿರಿಯ ವಕೀಲರಾದ ಎಸ್.ಎಸ್. ಹಿರೇಮಠ, ಲೆಕ್ಕ ಪರಿಶೋಧಕರಾದ ಆನಂದ ಪೋತ್ನೀಸ್, ಉದ್ಯಮಿಗಳಾದ ವಿರೇಶ ಮಡಿವಾಳರ ಹಾಗೂ ನಗರದ ವಿವಿಧ ಕ್ಷೇತ್ರಗಳ ಗಣ್ಯರು ಉಪಸ್ಥಿತರಿದ್ದರು.

### ರೋಟರಿ ಸಂಸ್ಥೆಯಿಂದ ಶಾಗೋಟಿ ಗ್ರಾಮದಲ್ಲಿ ರಕ್ತದ ಗುಂಪು ತಪಾಸಣೆ

# ಗ್ರಾಮದ ಪ್ರಗತಿಯೇ ದೇಶದ ಪ್ರಗತಿ



■ವಿಜಯಸಾಕ್ಷಿ ಸುದ್ದಿ, ಗದಗ

ರೋಟರಿ ಕ್ಲಬ್ ಗದಗ-ಬೆಟಗೇರಿ ಹಾಗೂ ಬಸವೇಶ್ವರ ಬ್ಲಡ್ ಸೆಂಟರ್ ಗದಗ ಇವುಗಳ ಸಂಯುಕ್ತಾಶ್ರಯದಲ್ಲಿ ಶಾಗೋಟಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಸರ್ಕಾರಿ ಪ್ರೌಢಶಾಲೆಯ ಮಕ್ಕಳ ರಕ್ತದ ಗುಂಪು ತಪಾಸಣಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಶಿಬಿರವನ್ನು ರೋಟರಿ ಸಂಸ್ಥೆ ಗದಗ-ಬೆಟಗೇರಿಯ ಅಧ್ಯಕ್ಷ ರೊ. ಚಂದ್ರಮೌಳಿ ಜಾಲಿ ಉದ್ಘಾಟಿಸಿ ಚಂದ್ರಮೌಳಿ ಜಾಲಿ ಉದ್ಘಾಟಿಸಿ ಮಾತನಾಡಿ, ಗ್ರಾಮದ ಪ್ರಗತಿಯೇ ದೇಶದ ಪ್ರಗತಿಯಾಗಲು ಸಾಧ್ಯ. ಗ್ರಾಮೀಣ ಪ್ರದೇಶದ ಮಕ್ಕಳಿಗೆ ಹೆಚ್ಚಿನ ಅವಕಾಶ ಮತ್ತು ಸೌಲಭ್ಯಗಳನ್ನು ನೀಡುವುದಕ್ಕಾಗಿ ಗ್ರಾಮೀಣ ಪ್ರದೇಶದ ಶಾಲೆಗಳನ್ನೇ ಆಯ್ಕೆ ಮಾಡಿಕೊಳ್ಳಲಾಗುತ್ತಿದೆ. ಪ್ರಸ್ತುತ ಇಂದು 350 ಮಕ್ಕಳ ರಕ್ತ ತಪಾಸಣೆ ಮಾಡಲಾಗುತ್ತದೆ ಎಂದರು.

ರೋಟರಿ ಅಧ್ಯಕ್ಷ ರೊ. ಶ್ರೀಧರ ಸುಲ್ತಾನಪೂರ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಗದಗ ಗ್ರಾಮೀಣ ವಲಯದ ಅಧ್ಯಕ್ಷ ಶಿವಯೋಗಿ ಬಂಡಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕ್ಷೇತ್ರ ಶಿಕ್ಷಣಾಧಿಕಾರಿ ವಿ.ವಿ. ನಡುವಿನಮನಿ ಮಾತನಾಡಿ, ಶಾಲೆಗಳ ಸರ್ವತೋಮುಖ ಬೆಳವಣಿಗೆ ಆಗಬೇಕಾದರೆ ಸಮುದಾಯ, ಸಹಕಾರಿ ಸಂಸ್ಥೆ, ವಿವಿಧ ಸಂಘಟನೆ, ಉದ್ದಿಮೆ ಇನ್ನಿತರರಿಂದ ದೇಣಿಗೆಯನ್ನು ಪಡೆದು ಶೈಕ್ಷಣಿಕ ಚಟುವಟಿಕೆಗಳಿಗೆ ಅವಶ್ಯಕ ಸಲಕರಣೆಗಳನ್ನು ಪಡೆದುಕೊಳ್ಳುವುದು ಉತ್ತಮ ಸಂಪ್ರದಾಯ. ರೋಟರಿ ಸಂಸ್ಥೆ ನಮ್ಮ ಗ್ರಾಮೀಣ ವಲಯದ ಹಲವಾರು ಶಾಲೆಗಳಿಗೆ ವಿವಿಧ ರೀತಿಯ ಸೌಲಭ್ಯಗಳನ್ನು ಒದಗಿಸುತ್ತಿದ್ದು, ಸಂಸ್ಥೆಯ ಪದಾಧಿಕಾರಿಗಳಿಗೆ ಇಲಾಖೆ ಅಭಿನಂದಿಸುತ್ತದೆ ಎಂದರು.

ಈ ಸಂದರ್ಭದಲ್ಲಿ ರೋಟರಿ ಸಂಸ್ಥೆಯ ಪದಾಧಿಕಾರಿಗಳಾದ ಡಾ. ಆರ್.ಬಿ. ಉಪ್ಪಿನ, ಯೋಜನಾ ಸಂಯೋಜಕ ಎಸ್.ಎಸ್. ಹೊಸಳ್ಳಿಮಠ, ಬಸವೇಶ್ವರ ಬ್ಲಡ್ ಸೆಂಟರ್‌ನ ನಿರ್ದೇಶಕ ರೊ. ಅನಿಲಕುಮಾರ ಹಂದ್ರಳ, ಎಸ್.ಡಿ.ಎಂ.ಸಿ.ಯ ಶೋಭಾ ಬ.ನೀಲಪ್ಪಗೌಡ್ರ, ಶಂಕರಗೌಡ ಪಾಟೀಲ, ಚಿಕ್ಕಹಂದಿಗೋಳ ಗ್ರಾ.ಪಂ ಅಧ್ಯಕ್ಷೆ ನಿವೇದಿತಾ ಸಿ.ಹಿರೇಮಠ, ಸದಸ್ಯರಾದ ರಾಮಣ್ಣ ಕುರ್ತಕೋಟಿ, ಬಸಪ್ಪ ಅಣ್ಣಿಗೇರಿ, ಪ್ರಧಾನ ಗುರುಗಳಾದ ಹೊನ್ನಾಪುರ ವೇದಿಕೆ ಮೇಲೆ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಕಲಾದಗಿ, ಲಕ್ಕಮ್ಮನವರ, ಶಿಕ್ಷಕರಾದ ಎನ್.ಬಿ. ಬೊಮ್ಮನಹಳ್ಳಿ, ಕೆ.ಆರ್. ಪಾಟೀಲ, ಬಿ.ವಿ. ಹೊಸಮನಿ, ಎ.ಎಚ್. ಮುದರಡ್ಡಿ, ರಶ್ಮಿ ಪಿ.ಐ. ಹಾಜರಿದ್ದರು. ಬಿ.ಎಸ್. ಹುಲ್ಯಾಳ ಸ್ವಾಗತಿಸಿದರು.

ಕೆ.ಎಸ್. ದಿಂಡಿ ಕಾರ್ಯಕ್ರಮ ನಿರೂಪಿಸಿದರು. ಎಂ.ಎಚ್.ಪೂಜಾರ ವಂದಿಸಿದರು.

## ನೂತನ ಡಿಎಸ್‌ಪಿ ಜೆ.ಹೆಚ್. ಇನಾಮದಾರರಿಗೆ ಸನ್ಮಾನ



■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲೆಯ ನೂತನ ಡಿಎಸ್‌ಪಿ ಆಗಿ ಅಧಿಕಾರ ಸ್ವೀಕರಿಸಿದ ಜೆ.ಹೆಚ್. ಇನಾಮದಾರರನ್ನು ಗದಗ ಜಿಲ್ಲಾ ಜೈ ಭೀಮ ಸಂಘರ್ಷ ಸಮಿತಿಯ ಜಿಲ್ಲಾಧ್ಯಕ್ಷ ಗಣೇಶ ವಾಯ್.ಹುಬ್ಬಳ್ಳಿ ನೇತೃತ್ವದಲ್ಲಿ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಸಮಿತಿಯ ಉಪಾಧ್ಯಕ್ಷ ಮಂಜುನಾಥ ಎಫ್. ತೌಜಲ್, ರೋಣ ತಾಲೂಕಾಧ್ಯಕ್ಷ ಬಸವರಾಜ ಬದಾಮಿ, ಅಲ್ಪಸಂಖ್ಯಾತರ ಘಟಕದ ಜಿಲ್ಲಾಧ್ಯಕ್ಷ ರಾಷ್ಟ್ರೀನ್ ಜೋಸೆಫ್, ಅಲ್ಪಸಂಖ್ಯಾತರ ಘಟಕದ ಜಿಲ್ಲಾ ಉಪಾಧ್ಯಕ್ಷ ರಾಜೇಶ ವಿ.ಶೆಟ್ಟರ್, ಅಲ್ಪಸಂಖ್ಯಾತರ ಘಟಕದ ಯುವ ಘಟಕದ ಗದಗ ಜಿಲ್ಲಾ ಅಧ್ಯಕ್ಷ ಇಮಾಮಹುಸೇನ ಎ.ಕುನ್ನಿಬಾವಿ, ಉಪಾಧ್ಯಕ್ಷ ನಜೀರ ಕುನ್ನಿಬಾವಿ, ಯುವ ಕಾರ್ಯದರ್ಶಿ ಸಮೀರ ಕುನ್ನಿಬಾವಿ, ಸಹ-ಕಾರ್ಯದರ್ಶಿ ಶಿವಣ್ಣ ಕಡಿವಾಲ, ಹೇಮಂತ ಹುಬ್ಬಳ್ಳಿ, ಯಶವಂತ ಹುಬ್ಬಳ್ಳಿ, ಶ್ರೀಕಾಂತ ಹಲವಾಗಲಿ, ಮಡಿವಾಳ ಸಮಾಜದ ಮುಖಂಡರಾದ ಕೃಷ್ಣಪ್ಪ ಮಡಿವಾಳರ ಉಪಸ್ಥಿತರಿದ್ದರು.

## ಸಾವಯವ ಗೊಬ್ಬರ ಬಳಕೆ ಕುರಿತು ಬೀದಿ ನಾಟಕ



■ವಿಜಯಸಾಕ್ಷಿ ಸುದ್ದಿ, ಗದಗ

ಇಲ್ಲಿನ ನೆಹರು ಯುವ ಕೇಂದ್ರ ಗದಗ ಮತ್ತು ಕೆ.ಎಲ್.ಇ ಸಂಸ್ಥೆಯ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ರಾಷ್ಟ್ರೀಯ ಸೇವಾ ಯೋಜನಾ ಘಟಕ ಇವರ ಸಂಯುಕ್ತ ಆಶ್ರಯದಲ್ಲಿ ನಾಗಾವಿ ಗ್ರಾಮದಲ್ಲಿ ಸಾವಯವ ಗೊಬ್ಬರ ಮತ್ತು ಮಹಿಳೆಯರ ಶಿಕ್ಷಣದ ಬಗ್ಗೆ ವಿದ್ಯಾರ್ಥಿಗಳಿಂದ ಬೀದಿ ನಾಟಕ ಪ್ರದರ್ಶನ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಘಟಕದ ಕಾರ್ಯಕ್ರಮಾಧಿಕಾರಿ ವಿಠ್ಠಲ್ ಕೊಳ್ಳಿ, ನೆಹರು ಯುವ ಕೇಂದ್ರದ ರವಿಕುಮಾರ್ ಹೊಂಬಾಳಿ, ನೇತ್ರಾ ವಾಲಿಕಾರ, ರೋಹಿಣಿ.ಕೆ ಮುಂತಾದವರು ಭಾಗವಸಿದ್ದರು.

# ಗುಲಾಬಿ ಆಂದೋಲನ ಜಾಥಾ




■ವಿಜಯಸಾಕ್ಷಿ ಸುದ್ದಿ, ಹರಪನಹಳ್ಳಿ

ತಂಬಾಕನ್ನು ಬಳಸುವುದರಿಂದ ಕ್ಯಾನ್ಸರ್, ಕ್ಷಯರೋಗ, ದಂತಕ್ಷಯ, ಗರ್ಭಕೋಶದ ಕ್ಯಾನ್ಸರ್ ಸೇರಿದಂತೆ ಆನೇಕ ರೋಗಗಳಿಗೆ ತುತ್ತಾಗಬೇಕಾಗುತ್ತದೆ ಎಂದು ವಕೀಲರ ಸಂಘದ ಅಧ್ಯಕ್ಷ ರಾಮನಗೌಡ ಪಾಟೀಲ್ ಹೇಳಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಜಯನಗರ ಜಿಲ್ಲಾ ತಂಬಾಕು ನಿಯಂತ್ರಣ ಘಟಕ, ತಾಲೂಕು ಆರೋಗ್ಯ ಅಧಿಕಾರಿಗಳ ಕಚೇರಿ, ಹರಪನಹಳ್ಳಿ ಎಸ್.ಸಿ.ಎಸ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ ಹಾಗೂ ತಾಲೂಕು ಕಾನೂನು ಪ್ರಾಧಿಕಾರ ಹರಪನಹಳ್ಳಿ ಇವರ ಸಹಯೋಗದಲ್ಲಿ ವಿಶ್ವ ಕ್ಯಾನ್ಸರ್ ದಿನಾಚರಣೆಯ ಪ್ರಯುಕ್ತ ತಂಬಾಕು ಮುಕ್ತ ಜೀವನಕ್ಕಾಗಿ ತಾಲೂಕಿನಾದ್ಯಂತ ಹಮ್ಮಿಕೊಂಡಿದ್ದ 'ಗುಲಾಬಿ ಆಂದೋಲನ ಜಾಥಾ' ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ತಾಲೂಕಾ ಆರೋಗ್ಯ ಅಧಿಕಾರಿ ಡಾ.ಹಾಲಸ್ವಾಮಿ. ಎಸ್.ಪಿ. ಮಾತನಾಡಿ, 30 ವರ್ಷ ಮೇಲ್ಪಟ್ಟ ಪ್ರತಿಯೊಬ್ಬರೂ ಪ್ರತಿ ವರ್ಷ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುವುದು ಅವಶ್ಯಕ. ಜೊತೆಗೆ 9ರಿಂದ 14 ವರ್ಷದ ಹೆಣ್ಣು ಮಕ್ಕಳಿಗೆ ಉಚಿತವಾಗಿ ಕ್ಯಾನ್ಸರ್ ಲಸಿಕೆಯನ್ನು ಸರಕಾರ ನೀಡಲು ಮುಂದಾಗಿದೆ ಎಂದು ತಿಳಿಸಿದರು.

ಅಂಗಡಿಗಳಿಗೆ ಭೇಟಿ ನೀಡಿ, ವ್ಯಾಪಾರಸ್ಥರಿಗೆ ಗುಲಾಬಿ ಹೂವನ್ನು ಕೊಡುವುದರ ಮೂಲಕ ತಂಬಾಕು ಮತ್ತು ತಂಬಾಕಿನ ಉತ್ಪನ್ನಗಳ ಮಾರಾಟವನ್ನು ನಿಲ್ಲಿಸುವಂತೆ ಮನವಿ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಎಸ್.ಸಿ.ಎಸ್ ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲ ಡಾ.ಶಂಕರಯ್ಯ, ಸಹಾಯಕ ಸರಕಾರಿ ಅಭಿಯೋಜಕರು, ವಕೀಲರಾದ ನಿರ್ಮಲಾ.ಡಿ, ಮೃತ್ಯುಂಜಯ, ಎಂ.ನಾಗೇಂದ್ರಪ್ಪ, ತಿಪ್ಪೇಶ್, ನಳೀನ್ ಕುಮಾರಿ, ನಾಗರಾಜ ನಾಯ್ಕ್, ಫೀರ್ ಅಹ್ಮದ್, ತಾಲೂಕು ಆರೋಗ್ಯ ಶಿಕ್ಷಣಾಧಿಕಾರಿ ಎಚ್. ಗೌರಮ್ಮ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಬಿ.ರುದ್ರಚಾರಿ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಭುವನೇಶ್ವರಿ, ಪ್ರಾಥಮಿಕ ಆರೋಗ್ಯ ಸುರಕ್ಷಣಾಧಿಕಾರಿ ಸುನಿತಾ, ರೇಣುಕಾ, ಶೃತಿ, ದೀಪಿಕಾ, ಜ್ಯೋತಿ, ನರ್ಸಿಂಗ್ ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಆಶಾ ಕಾರ್ಯಕರ್ತೆಯರು ಕಾ ಂ ೯ ್ ಕ ್ರ ವ ್ ಂ ದ ್ ಲ್ಲಿ ಪಾಲ್ಗೊಂಡಿದ್ದರು.

## ವೇಳಾಪಟ್ಟಿಯಂತೆ ಶ್ರದ್ಧೆಯಿಂದ ಅಭ್ಯಾಸ ಮಾಡಿ



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ವಿದ್ಯಾರ್ಥಿಗಳಿಗೆ ಪಠ್ಯ ವಿಷಯಗಳಲ್ಲಿ ಎದುರಾಗುವ ಸಮಸ್ಯೆಗಳನ್ನು ಆಯಾ ವಿಷಯಗಳ ಸಂಪನ್ಮೂಲ ಶಿಕ್ಷಕರಿಂದ ಪರಿಹರಿಸಿಕೊಂಡು ವಿಷಯ ಜ್ಞಾನ ಹೊಂದಲು ಫೋನ್ ಇನ್ ನೇರ ಕಾರ್ಯಕ್ರಮ ಸಹಕಾರಿಯಾಗಿದೆ ಎಂದು ಡಿಡಿಪಿಐ ಎಂ.ಎ. ರಡ್ಡೇರ ಹೇಳಿದರು.

ಅವರು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಶಿರಹಟ್ಟಿಯಿಂದ ಪಟ್ಟಣದ ಪಿಎಸ್‌ಬಿಡಿ ಬಾಲಕಿಯರ ಪ್ರೌಢಶಾಲೆಯಲ್ಲಿ ಹಮ್ಮಿಕೊಂಡಿದ್ದ ಫೋನ್ ಇನ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಎಸ್‌ಎಸ್‌ಎಲ್‌ಸಿ ಫಲಿತಾಂಶ ಸುಧಾರಣೆಗಾಗಿ ಹಲವಾರು ರಚನಾತ್ಮಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ಅವುಗಳಲ್ಲಿ ಫೋನ್ ಇನ್ ಕಾರ್ಯಕ್ರಮ ಮುಖ್ಯವಾಗಿದೆ. ಪರೀಕ್ಷೆ ಸಮೀಪಿಸುತ್ತಿದ್ದು, ವಿದ್ಯಾರ್ಥಿಗಳು ಸಮಯ ವ್ಯರ್ಥ ಮಾಡದೇ ವೇಳಾಪಟ್ಟಿಯಂತೆ ಶ್ರದ್ಧೆಯಿಂದ ಅಭ್ಯಾಸ ಮಾಡಬೇಕು. ಈ ಬಗ್ಗೆ ಯಾವುದೇ ಸ್ವಾಭಿಮಾನ-ಬಿಗುಮಾನ, ಕೀಳರಿಮೆ ಬಿಡಬೇಕು ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಜಿ.ಎಮ್. ಮುಂದಿನಮನಿ ಮಾತನಾಡಿ, 2023-24ನೇ ಸಾಲಿನ ಎಸ್‌ಎಸ್‌ಎಲ್‌ಸಿ ಫಲಿತಾಂಶ ಸುಧಾರಣೆಗಾಗಿ ಶಾಲಾ ಆರಂಭದಿಂದಲೇ ಹಲವಾರು ಕ್ರಿಯಾತ್ಮಕ ಯೋಜನೆಗಳನ್ನು ಹಾಕಿಕೊಂಡು ಅನುಷ್ಠಾನಗೊಳಿಸಲಾಗುತ್ತಿದೆ ಎಂದರು.

ಬಿಆರ್‌ಪಿ ಈಶ್ವರ ಮೆಡ್ಲೇರಿ ಫಲಿತಾಂಶ ಸುಧಾರಣೆಗಾಗಿ ಕೈಗೊಂಡ ಕಾರ್ಯ ಯೋಜನೆಗಳ ಬಗ್ಗೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಪನ್ಮೂಲ ಶಿಕ್ಷಕರಾದ ಜೆ.ಡಿ. ಲಮಾಣಿ, ವಾಸುದೇವ ಮಡ್ಲಿ, ಡಿ.ಡಿ. ಲಮಾಣಿ, ಅಶೋಕ ಛತ್ರದ ಮತ್ತಿತರರು ವಿಧ್ಯಾರ್ಥಿಗಳಿಂದ ಪೋನ್ ಕರೆಗಳನ್ನು ಸ್ವೀಕರಿಸಿ ಮಾರ್ಗದರ್ಶನ ನೀಡಿದರು. ನೂರಾರು ವಿದ್ಯಾರ್ಥಿಗಳು ಫೋನ್ ಮಾಡಿ ಪರಿಹಾರ ಕಂಡುಕೊಂಡರು.

ಈ ವೇಳೆ ಶಿಕ್ಷಕರಾದ ಬಿ.ಎಂ ಯರಗುಪ್ಪಿ, ಎಸ್.ಡಿ ಲಮಾಣಿ, ರಾಜೇಶ ಉಮಚಗಿ, ಎಂ.ಸಿ. ಹಿರೇಮಠ, ದತ್ತಾತ್ರೇಯ ವೈದ್ಯ, ಎಸ್.ಬಿ. ಅಣ್ಣಿಗೇರಿ, ಪ್ರಭುಗೌಡ ಯಕ್ಕಿಕೊಪ್ಪ, ಫಕೀರೇಶ ಚಕಾರದ, ಪ್ರದೀಪ ಶೆಟ್ಟಿ, ಸತೀಶ ಬೋಮಲೆ, ಉಮೇಶ ನೇಕಾರ, ಎನ್.ಎ. ಮುಲ್ಲಾ ಇದ್ದರು.

### 'ಹೆಣ್ಣು ಮಗುವನ್ನು ಉಳಿಸಿ' ವಿಚಾರ ಸಂಕಿರಣದಲ್ಲಿ ಡಾ.ಹಳೇಮನಿ

# ಹೆಣ್ಣು ಮಕ್ಕಳ ಆರೋಗ್ಯ-ಶಿಕ್ಷಣಕ್ಕೆ ಮಹತ್ವ ನೀಡಿ




■ವಿಜಯಸಾಕ್ಷಿ ಸುದ್ದಿ, ಗದಗ

ಹೆಣ್ಣು ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಅದರಲ್ಲೂ ಆರೋಗ್ಯ ಮತ್ತು ಶಿಕ್ಷಣಕ್ಕೆ ಹೆಚ್ಚಿನ ಮಹತ್ವವನ್ನು ಪಾಲಕ-ಪೋಷಕರು ನೀಡಬೇಕು ಎಂದು ಭಾರತೀಯ ಮಕ್ಕಳ ವೈದ್ಯರ ಸಂಘಟನೆಯ ಗದಗ ಜಿಲ್ಲಾಧ್ಯಕ್ಷ ಡಾ.ಈರಣ್ಣ ಹಳೇಮನಿ ಹೇಳಿದರು.

ಅವರು ಗುರುವಾರ ಗದುಗಿನ ಆಶ್ರಯ ಆಸ್ಪತ್ರೆಯ ಸಭಾಂಗಣದಲ್ಲಿ ಭಾರತೀಯ ಮಕ್ಕಳ ತಜ್ಞರ ಸಂಘಟನೆ ಗದಗ ಶಾಖೆ, ಲಯನ್ಸ್ ಕ್ಲಬ್ ಆಫ್ ಗದಗ-ಬೆಟಗೇರಿ ಮತ್ತು ಆಶ್ರಯ ವೈದ್ಯಕೀಯ ಮತ್ತು ಕೃಷಿ ಸಂಶೋಧನಾ ಟ್ರಸ್ಟ್ ಸಹಯೋಗದಲ್ಲಿ ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ ಅಂಗವಾಗಿ ಏರ್ಪಡಿಸಿದ್ದ 'ಹೆಣ್ಣು ಮಗುವನ್ನು ಉಳಿಸಿ' ವಿಚಾರ ಸಂಕಿರಣದ ಮುಖ್ಯ ಅತಿಥಿಗಳಾಗಿ ಮಾತನಾಡಿದರು.

ಮಹಿಳೆ ಮತ್ತು ಹೆಣ್ಣು ಮಕ್ಕಳ ಆರೋಗ್ಯ ಸುಧಾರಣೆಗೆ ಸರಕಾರ ಹಲವಾರು ಕಾರ್ಯಯೋಜನೆಗಳನ್ನು ರೂಪಿಸಿವೆ. 9-14 ವರ್ಷದ ಹೆಣ್ಣು ಮಕ್ಕಳಿಗೆ ಗರ್ಭಕಂಠದ ಕ್ಯಾನ್ಸರ್ ತಡೆಗಟ್ಟುವ ಲಸಿಕೆಗಳನ್ನು ಕೇಂದ್ರ ಸರ್ಕಾರ ತರುವ ವಿಷಯ ಸ್ವಾಗತಾರ್ಹ ಎಂದರು.

ಆಶ್ರಯ ಆಸ್ಪತ್ರೆಯ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ.ಸುನಿತಾ ಕುರಡಗಿ ಮಾತನಾಡಿ, ಹೆಣ್ಣು ಮಗುವಿಗೆ ಸಮಾನ ಅವಕಾಶಗಳು ಮತ್ತು ಸಮಾನ ಹಕ್ಕುಗಳ ಪ್ರಾಮುಖ್ಯತೆಯನ್ನು ನೀಡುವದು ಎಂದಿಗಿಂತ ಇಂದು ಅವಶ್ಯವಿದೆ. ಹೆಣ್ಣು ಮಗು ತನ್ನ ಪೂರ್ಣ ಸಾಮರ್ಥ್ಯವನ್ನು ಸಾಧಿಸಲು ಪ್ರೋತ್ಸಾಹಿಸುವಂತೆ ಅವರು ಪಾಲಕ-ಪೋಷಕರಲ್ಲಿ ವಿನಂತಿಸಿದರು.

ನಿತೀಶ್ ಸಾಲಿ ಅಧ್ಯಕ್ಷತೆ ವಹಿಸಿದ್ದರು. ಡಾ. ಶ್ರೀಧರ ವಿ.ಕುರಡಗಿ ಸ್ವಾಗತಿಸಿ, ಪರಿಚಯಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಜೆ.ಡಿ. ಉತ್ತರಕರ ಕುಟುಂಬದಲ್ಲಿ ಹೆಣ್ಣು ವಹಿಸುವ ಪ್ರಮುಖ ಪಾತ್ರವನ್ನು ವಿವರಿಸಿದರು. ಲಯನ್ಸ್ ಕ್ಲಬ್ ಕಾರ್ಯದರ್ಶಿ ಪ್ರವೀಣ ವಾರಕರ ನಿರೂಪಿಸಿದರು. ಲಯನ್ಸ್ ಕ್ಲಬ್‌ನ ಮಂಜುನಾಥ ವೀರಲಿಂಗಯ್ಯಮಠ, ಎಸ್.ಡಿ. ಪಾಟೀಲ, ಅನಿಲ ಕುಷ್ಟಗಿ, ಲಯನ್ಸ್ ಕ್ಲಬ್ ಸದಸ್ಯರು, ಆಶ್ರಯ ಆಸ್ಪತ್ರೆಯ ಸಿಬ್ಬಂದಿ ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

ವೈವಿಧ್ಯಮಯ ವಿಶೇಷತೆಯುಳ್ಳ ಕಲಾಕೃತಿಗಳ ಪ್ರದರ್ಶನ

# ನಾಳೆಯಿಂದ ಫೆ. 12ರವರೆಗೆ ಫಲಪುಷ್ಪ ಪ್ರದರ್ಶನ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾ ಆಡಳಿತ ಹಾಗೂ ಜಿಲ್ಲಾ ಪಂಚಾಯತ್, ಹಾಗೂ ತೋಟಗಾರಿಕೆ ಇಲಾಖೆ, ಇವರ ಸಂಯುಕ್ತ ಆಶ್ರಯದಲ್ಲಿ ಫಲಪುಷ್ಪ ಪದರ್ಶನ-2024ನ್ನು ಫೆಬ್ರವರಿ 10 ರಿಂದ 12 ರವರೆಗೆ 3 ದಿನಗಳ ಕಾಲ ನಗರದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಆವರಣದಲ್ಲಿರುವ ಸ್ವಾಮಿ ವಿವೇಕಾನಂದ ಸಭಾ ಭವನದಲ್ಲಿ ಆಯೋಜಿಸಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಅವರು ಫೆಬ್ರವರಿ 10 ರಂದು ಬೆಳಿಗ್ಗೆ 9.30 ಗಂಟೆಗೆ ಕಾರ್ಯಕ್ರಮ ಉದ್ಘಾಟಿಸಲಿದ್ದು, ವಿವಿಧ ಗಣ್ಯರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

ಬಾಳೆದಿಂಡಿನಿಂದ ಕೆತ್ತನೆ ಮಾಡಿದ ಗಣಪತಿ ಕಲಾಕೃತಿ ತಯಾರಿಸಲಾಗುತ್ತಿದೆ. ಶ್ರೀಮತಿ ಗಂಗೂಬಾಯಿ ಹಾನಗಲ್, ಹುಯಿಲಗೋಳ ನಾರಾಯಣರಾವ್, ಡಾ. ಭೀಮಸೇನ ಜೋಶಿ, ಡಾ.ಪುಟ್ಟರಾಜ ಗವಾಯಿ, ಕೆ.ಎಚ್.ಪಾಟೀಲ, ಸುನೀಲ ಜೋಶಿ ಅವರುಗಳ ಭಾವಚಿತ್ರವನ್ನು ಹಣ್ಣು ತರಕಾರಿಯಲ್ಲಿ ಕೆತ್ತನೆ ಮಾಡಲಾಗುತ್ತಿದೆ.

ಡಾ ಎಮ್ ಎಸ್ ಸ್ವಾಮಿನಾಥನ್ ರವರ ಭಾವಚಿತ್ರವನ್ನು ರಂಗೋಲಿಯಲ್ಲಿ ರಚಿಸಲಾಗುತ್ತಿದೆ. ಶ್ರೀ ಜಗಜ್ಯೋತಿ ಬಸವೇಶ್ವರರ ಮರಳಿನ ಕಲಾಕೃತಿಯನ್ನು ನಿರ್ಮಿಸಲಾಗುತ್ತಿದೆ.





ಪ್ರಸಕ್ತ ವರ್ಷ ಭಾರತೀಯ ಸಂವಿಧಾನವನ್ನು ಅಂಗೀಕರಿಸಿದ 75ನೇ ವರ್ಷದ ಸಂಭ್ರಮದಲ್ಲಿರುವ ಕಾರಣ ಡಾ. ಬಿ.ಆರ್. ಅಂಬೇಡ್ಕರ್ ಅವರ ಸಂವಿಧಾನ ಪೀಠಿಕೆಯನ್ನು ಹಣ್ಣು, ಹೂವು, ತರಕಾರಿಯಿಂದ ಅಲಂಕೃತಗೊಳಿಸಲಾಗುತ್ತಿದೆ. ಜಿಲ್ಲೆಯ ವಿವಿಧ ತಾಲೂಕುಗಳಿಂದ ರೈತರು ಬೆಳೆದ ವಿವಿಧ ಹಣ್ಣು ತರಕಾರಿ, ಹೂವು, ತೋಟದ ಬೆಳೆ ಮತ್ತು ಸಾಂಬಾರು ಬೆಳೆ ಉತ್ಪನ್ನಗಳ ಪ್ರದರ್ಶನ ಹಾಗೂ ಬೋನ್ಸಾಯ್ ಗಿಡಗಳ ಪ್ರದರ್ಶನವನ್ನು ಏರ್ಪಡಿಸಲಾಗಿದೆ. ಮೀನುಗಾರಿಕೆ ಇಲಾಖೆಯಿಂದ ಸುಂದರವಾದ ಅಕ್ವೇರಿಯಂ ಪ್ರದರ್ಶನ ಏರ್ಪಡಿಸಲಾಗುತ್ತಿದೆ.



ತೋಟಗಾರಿಕೆ ಹಾಗೂ ಕೃಷಿಗೆ ಸಂಬಂಧಿಸಿದ ಉಪಕಸುಬುಗಳಿಂದ ತಯಾರಿಸಿದ ಮೌಲ್ಯವರ್ಧನ ಮಾಡಿದ ಉತ್ಪನ್ನಗಳನ್ನು ಪ್ರದರ್ಶನ ಮಳಿಗೆಗಳಲ್ಲಿ ಪ್ರದರ್ಶಿಸಲಾಗುತ್ತಿದೆ. ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ವಿಶ್ವವಿದ್ಯಾಲಯ, ಐ ಸಿ ಏ ಆರ್, ಕೆ ಎಚ್ ಪಾಟೀಲ ಕೃಷಿ ವಿಜ್ಞಾನ ಕೇಂದ್ರ ಹುಲಕೋಟಿ, ಕೃಷಿ ತೋಟಗಾರಿಕೆ, ರೇಷ್ಮೆ, ಪಶುಸಂಗೋಪನೆ, ಮೀನುಗಾರಿಕೆ ಮುಂತಾದ ಇಲಾಖೆಯವರು ಪ್ರದರ್ಶನದಲ್ಲಿ ಭಾಗವಹಿಸಿ ಇಲಾಖೆಗಳ ಯೋಜನೆಗಳನ್ನು ತಿಳಿಸಿಕೊಡುವುದರ ಜೊತೆಗೆ ಮಾರ್ಗದರ್ಶನವನ್ನು ಸಹ ನೀಡಲಿದ್ದಾರೆ.

ಒಟ್ಟಾರೆಯಾಗಿ ಈ ಫಲಪುಷ್ಪ ಪ್ರದರ್ಶನವು 3 ದಿನಗಳ ಕಾಲ ನಡೆಯಲಿದ್ದು. ಸದರಿ ಪ್ರದರ್ಶನದಲ್ಲಿ ಜಿಲ್ಲೆಯ ರೈತರು, ಸಾರ್ವಜನಿಕರು, ಶಾಲಾ ಮಕ್ಕಳು ಪೋಷಕರು ಭೇಟಿ ನೀಡಿ ಕಾರ್ಯಕ್ರಮದ ಸದುಪಯೋಗ ಪಡೆದುಕೊಳ್ಳಬೇಕೆಂದು ತೋಟಗಾರಿಕೆ ಇಲಾಖೆಯ ಉಪನಿರ್ದೇಶಕ ಶಶಿಕಾಂತ ಕೋಟಿಮನಿ ತಿಳಿಸಿದ್ದಾರೆ.

## ವೈವಿಧ್ಯಮಯ ವಿಶೇಷತೆಯುಳ್ಳ ಕಲಾಕೃತಿಗಳ ಪ್ರದರ್ಶನ

ತೋಟಗಾರಿಕೆ ಬೆಳೆಗಳಾದ ಹಣ್ಣು, ಹೂವು, ತರಕಾರಿ ಮತ್ತು ಸಾಂಬಾರು ಪದಾರ್ಥಗಳಿಂದ, ವೈವಿಧ್ಯಮಯ ವಿಶೇಷತೆಯುಳ್ಳ ಕಲಾಕೃತಿಗಳನ್ನು ತಯಾರಿಸಲಾಗುತ್ತಿದೆ. ಗದುಗಿನ ವೀರನಾರಾಯಣ ದೇವಸ್ಥಾನದ ಪ್ರತಿಕೃತಿಯನ್ನು ವಿವಿಧ ಹೂವುಗಳಿಂದ ವಿಶೇಷವಾಗಿ ಗುಲಾಬಿ ಹೂವುಗಳಿಂದ ರಚಿಸಲಾಗುತ್ತಿದೆ. ಮೈಸೂರು ಅರಮನೆಯಲ್ಲಿ ದಸರಾ ಅಂಬಾರಿ ಹೊರುತ್ತಿದ್ದ, ಅರ್ಜುನ ಆನೆಯ ಪ್ರತಿರೂಪವನ್ನು ವೈವಿಧ್ಯಮಯ ಹೂವುಗಳಿಂದ ತಯಾರಿಸಲಾಗುತ್ತಿದೆ. ಕರ್ನಾಟಕ ರಾಜ್ಯವು 50ನೇ ವರ್ಷದ ಕರ್ನಾಟಕ ರಾಜ್ಯೋತ್ಸವವನ್ನು ಆಚರಿಸಿಕೊಳ್ಳುತ್ತಿರುವ ಈ ಸಂದರ್ಭದಲ್ಲಿ ಕರ್ನಾಟಕ ಸುವರ್ಣ ಸಂಭ್ರಮ 50 ಶೀರ್ಷಿಕೆಯನ್ನು ಹೂವುಗಳಿಂದ ರಚಿಸಿ ಸೆಲ್ಫಿ ಪಾಯಿಂಟನ್ನು ಮಾಡಲಾಗುತ್ತಿದೆ.

ಹಣ್ಣು, ಹೂವು, ತರಕಾರಿ ಮತ್ತು ಸಾಂಬಾರು ಪದಾರ್ಥಗಳಿಂದ ಮತದಾನದ ಜಾಗೃತಿ ಮೂಡಿಸಲು ಇ ವಿ ಎಂ ಮಷಿನ್, ನವಿಲು ವನ, ಜಲಪಾತ, ಸಂಗೀತಾ ಸಾಧನಗಳಾದ ತಬಲಾ, ಪಿಯಾನೋ ಮುಂತಾದವುಗಳನ್ನು ವರ್ಟಿಕಲ್ ಗಾರ್ಡನ್ ಇದರ ಜೊತೆಗೆ ಜೇನು ಸಾಗಾಣಿಕೆ, ಅಣಬೆ ಕೃಷಿ ಬಗ್ಗೆ ಮಾಹಿತಿ ಹಾಗೂ ವಿವಿಧ ಜಾತಿಯ ಅಣಬೆಗಳನ್ನು ಪ್ರದರ್ಶನದಲ್ಲಿ ಇಡಲಾಗುತ್ತಿದೆ.

# ಶಾಲೆಗಳ ಅಭಿವೃದ್ಧಿಗೆ ಮೊದಲ ಆದ್ಯತೆ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ



ಪಟ್ಟಣದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ನಂ-4ರ ಶಾಲಾ ಆವರಣಕ್ಕೆ ಫೆವರ್ಸ್ ಅಳವಡಿಸಿ ಅಭಿವೃದ್ಧಿಪಡಿಸುವ ಕಾಮಗಾರಿಗೆ ಶಾಸಕ ಡಾ.ಚಂದ್ರು ಲಮಾಣಿ ಗುರುವಾರ ಭೂಮಿಪೂಜೆ ನೆರವೇರಿಸಿದರು.

ಈ ವೇಳೆ ಮಾತನಾಡಿದ ಅವರು, ಕ್ಷೇತ್ರದಲ್ಲಿನ ಶಾಲೆಗಳ ಅಭಿವೃದ್ಧಿಯೇ ನನ್ನ ಮೊದಲ ಆದ್ಯತೆಯಾಗಿದೆ. ಈ ನಿಟ್ಟಿನಲ್ಲಿ ಕ್ಷೇತ್ರ ವ್ಯಾಪ್ತಿಯಲ್ಲಿನ ಶಾಲೆಗಳಲ್ಲಿ ಕೊಠಡಿ ನಿರ್ಮಾಣ, ದುರಸ್ಥಿ ಸೇರಿ ಅಗತ್ಯ ಸೌಲಭ್ಯ ಕಲ್ಪಿಸುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ರಸ್ತೆ ಬದಿಗೆ ಹೊಂದಿಕೊಂಡಿರುವ ಈ ಶಾಲೆಯಲ್ಲಿ ಹೆಚ್ಚು ಮಕ್ಕಳು ಓದುತ್ತಿದ್ದು, ಧೂಳಿನಿಂದ ಕೂಡಿರುವ ಶಾಲಾ ಮೈದಾನದಲ್ಲಿ ಮಕ್ಕಳು ಆಟ ಆಡಲು, ಬಿಸಿಯೂಟ ಮಾಡುವಾಗ ಧೂಳು ತಟ್ಟೆಯಲ್ಲಿ ಬಿಳುತ್ತಿತ್ತು. ಇದರಿಂದಾಗಿ ಮಕ್ಕಳಿಗೆ ಶ್ವಾಸಕೋಶ ಸಂಬಂಧಿಸಿದ ಖಾಯಿಲೆಗಳು ಬರುತ್ತಿವೆ. ಇದನ್ನು ಮನಗಂಡು ಶಾಸಕರ ಕ್ಷೇತ್ರಾಭಿವೃದ್ಧಿ ಅನುದಾನದಲ್ಲಿ ಶಾಲಾ ಆವರಣಕ್ಕೆ ಫೆವರ್ಸ್ ಹಾಕಲಾಗುತ್ತಿದೆ ಎಂದರು.

ಪುರಸಭೆ ಸದಸ್ಯ ಬಸವರಾಜ ಓದುನವರ ಮಾತನಾಡಿ, ಪಟ್ಟಣದಲ್ಲಿಯೇ ಅತೀ ಹೆಚ್ಚು ಮಕ್ಕಳು ಓದುವ ಶಾಲೆ ಇದಾಗಿದ್ದು, ಶಾಲಾ ಕಟ್ಟಡದ ಕೆಲವು ಕೊಠಡಿಗಳ ಮೇಲ್ಛಾವಣಿಯ ಹೆಂಚುಗಳನ್ನು ಬದಲಾಯಿಸಿ, ಆರ್‌ಸಿಸಿ ಹಾಕಬೇಕು ಎಂದು ಶಾಸಕರಿಗೆ ಮನವಿ ಮಾಡಿದರು.

ಈ ವೇಳೆ ಸುನೀಲ ಮಹಾಂತಶೆಟ್ಟರ, ಶಕ್ತಿ ಕತ್ತಿ, ವಿಜಯ ಮೆಕ್ಕಿ, ವಿಜಯ ಬೂದಿಹಾಳ, ನವೀನ ಬೆಳ್ಳಟ್ಟಿ, ರಾಜೇಶ್ವರಿ ಹಾರಕುಣಿ, ರಮೇಶ ದನದಮನಿ, ಮಂಜುನಾಥ ಉಮಚಗಿ, ಸಾವಿತ್ರಿ ಅತ್ತಿಗೇರಿ, ಬಸವರಾಜ ಕುರಿ, ಬಸವರಾಜ ಕುಂಬಾರ, ವಾಸು ಪಾಟೀಲ, ಮಂಜುನಾಥ ಗೊರವರ, ಬಸವರಾಜ ಚರ್ಕಸಾಲಿ, ಮುಖ್ಯೋಪಾಧ್ಯಾಯ ಎಚ್.ಬಿ. ಸಣ್ಣಮನಿ, ಬಿಆರ್‌ಪಿ-ಸಿಆರ್‌ಪಿಗಳು, ಶಿಕ್ಷಕರು ಇದ್ದರು.

# ಮಕ್ಕಳನ್ನೇ ತಮ್ಮ ಸಂಪತ್ತನ್ನಾಗಿಸಿ



■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಶಿಕ್ಷಣ ಎಲ್ಲಕ್ಕಿಂತ ಶ್ರೇಷ್ಠವಾದ ಸಂಪತ್ತಾಗಿದೆ. ಗ್ರಾಮೀಣ ಭಾಗದ ಪಾಲಕರು ತಮ್ಮ ಮಕ್ಕಳನ್ನು ತಪ್ಪದೇ ಶಾಲೆಗೆ ಕಳುಹಿಸಬೇಕು. ಆ ಮೂಲಕ ಮಕ್ಕಳನ್ನೇ ತಮ್ಮ ಸಂಪತ್ತನ್ನಾಗಿಸುವತ್ತ ಚಿತ್ತ ಹರಿಸಬೇಕು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಜಿ.ಎಂ. ಮುಂದಿನಮನಿ ಹೇಳಿದರು.

ಅವರು ಸಮೀಪದ ಒಡೆಯರ ಮಲ್ಲಾಪುರ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಪ್ರಾಥಮಿಕ ಶಾಲಾ ಹಂತದಲ್ಲಿಯೇ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಶಿಕ್ಷಣದೊಂದಿಗೆ ಮಕ್ಕಳಲ್ಲಿನ ಪ್ರತಿಭೆ ಗುರುತಿಸಿ ಕ್ರೀಡೆ, ಕಲೆ, ಸಾಂಸ್ಕೃತಿಕ ಕಾರ್ಯ ಚಟುವಟಿಕೆಗಳಲ್ಲಿ ತೊಡಗಿಸಬೇಕು ಎಂದರು.

ಗ್ರಾ.ಪಂ ಸದಸ್ಯ ಪದ್ಮರಾಜ ಪಾಟೀಲ ಮಾತನಾಡಿ, ಸರಕಾರಿ ಶಾಲೆಗಳಲ್ಲಿ ದತ್ತಿ ನಿಧಿ ಸ್ಥಾಪಿಸಿ ಪ್ರತಿ ವರ್ಷ ಸಾಂಸ್ಕೃತಿಕ ಕಾರ್ಯಕ್ರಮ, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರ ಮಾಡಲಾಗುತ್ತದೆ ಎಂದರು.

ಬಿಆರ್‌ಪಿ ಈಶ್ವರ ಮೆಡ್ಲೇರಿ, ಬಿ.ಎಂ. ಯರಗುಪ್ಪಿ, ಎಸ್‌ಡಿಎಂಸಿ ಅಧ್ಯಕ್ಷ ಗದಿಗೆಪ್ಪ ತಳವಾರ, ಮುಖ್ಯೋಪಾಧ್ಯಾಯ ಪ್ರಭು ಹಾಲಗುಂಡಿ, ಗ್ರಾ.ಪಂ ಅಧ್ಯಕ್ಷ ಮಂಜನಗೌಡ ಕೆಂಚನಗೌಡ್ರ, ನಿರ್ಮಲಾ ತಳವಾರ, ನಾಗರತ್ನ ಕಡಾರಿ, ಸಿಆರ್‌ಪಿ ಜ್ಯೋತಿ ಗಾಯಕವಾಡ, ಎಂ.ಎಸ್. ಹಿರೇಮಠ, ಫಕ್ಕೀರೇಶ ಮಕರಬ್ಬಿ, ಚಂದ್ರಕಲಾ ಹುಲಿಮನಿ ಮುಂತಾದವರಿದ್ದರು.

# ಚಂದನ ವಿದ್ಯಾರ್ಥಿಗಳಿಂದ ಉಪಗ್ರಹ ಉಡಾವಣೆ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ



ಪಟ್ಟಣದ ಚಂದನ ಶಾಲೆಯ ವಿದ್ಯಾರ್ಥಿಗಳು ಇಸ್ರೋ ವಿಜ್ಞಾನಿಗಳ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ ಚಂದ್ರಯಾನ-3 ಕೃತಕ ಉಪಗ್ರಹದ ಉಡಾವಣೆ ಕಾರ್ಯಕ್ರಮವನ್ನು ಫೆ.12ರಂದು ಇಸ್ರೋ ಮಾಜಿ ಅಧ್ಯಕ್ಷ ಡಾ. ಎ.ಎಸ್. ಕಿರಣಕುಮಾರ ಉದ್ಘಾಟಿಸುವರು ಎಂದು ಚಂದನ ಶಾಲೆ ಸಂಸ್ಥಾಪಕ ಟಿ.ಈಶ್ವರ ಹೇಳಿದರು.

ಈ ಕುರಿತು ಮಾಧ್ಯಮದವರಿಗೆ ಮಾಹಿತಿ ನೀಡಿದ ಅವರು, ಈ ಹಿಂದೆ ಶಾಲೆಯಲ್ಲಿ ಚಂದ್ರಯಾನ ಕೃತಕ ಉಪಗ್ರಹ ಉಡಾವಣೆ ಮಾಡಿ ಎಲ್ಲರ ಗಮನ ಸೆಳೆದಿದ್ದರು. ಈಗ ಮುಂದುವರೆದು ಚಂದ್ರಯಾನ-3 ಕೃತಕ ಉಪಗ್ರಹ ನಿರ್ಮಿಸಿದ್ದಾರೆ. ಇತ್ತೀಚೆಗೆ ಚಂದ್ರನ ಮೇಲೆ ಯಶಸ್ವಿಯಾಗಿ ರೋವರ್ ಲ್ಯಾಂಡಿಗ್ ಮಾಡಿದ ಮಾದರಿ ಇದಾಗಿದೆ. ಶಾಲೆಯ ವಿದ್ಯಾರ್ಥಿಗಳು ಇಸ್ರೋ ವಿದ್ಯಾರ್ಥಿಗಳ ಸಹಕಾರದೊಂದಿಗೆ ಉಪಗ್ರಹ ಉಡಾವಣೆಗೆ ಅತ್ಯಂತ ಆಸಕ್ತಿಯಿಂದ ಎಲ್ಲ ಸಿದ್ಧತೆ ಮಾಡಿಕೊಂಡಿದ್ದಾರೆ.

ಇಸ್ರೋದಿಂದ ತರುವ ಚಂದ್ರನ ಮತ್ತು ಸೌರ ಮಂಡಳದ ವಿವಿಧ ವೈಜ್ಞಾನಿಕ ಸಿದ್ಧಾಂತಗಳ ಮಾದರಿಗಳನ್ನು ಚಂದನದ ವಿದ್ಯಾರ್ಥಿಗಳೇ ವಿವರಿಸಲಿದ್ದಾರೆ. ಈ ಕಾರ್ಯಕ್ರಮವನ್ನು ಚಂದ್ರಯಾನ-3ರ ಉಪಗ್ರಹ ಟ್ರ್ಯಾಕಿಂಗ್ ನಿಯಂತ್ರಿಸಿದ ಕರ್ನಾಟಕದ ವಿಜ್ಞಾನಿ ರೂಪಾ ಎಂ.ವ್ಹಿ ಅವರು ನೆರವೇರಿಸುವರು. ಕಾರ್ಯಕ್ರಮದಲ್ಲಿ ಕೃತಕ ಬುದ್ಧಿಮತ್ತೆ ಮತ್ತು ಯಂತ್ರ ಕಲಿಕೆ ತಂತ್ರಜ್ಞಾನಿ ಪ್ರೊ. ಡಾ.ವೆಂಕಟೇಶ ಉಪಸ್ಥಿತರಿರುವರು. ಈ ವಿಶೇಷ ಪ್ರಯೋಗವನ್ನು ಫೆ.12ರಿಂದ 29ರವರೆಗೆ ವೀಕ್ಷಿಸಲು ರಾಜ್ಯಾದ್ಯಂತ ವಿದ್ಯಾರ್ಥಿಗಳು, ಶಿಕ್ಷಕರಿಗೆ ಶಾಲೆಯಲ್ಲಿ ಮುಕ್ತ ಅವಕಾಶ ಕಲ್ಪಿಸಲಾಗಿದೆ. ಫೆ.12ರಂದೇ ಸಂಜೆ 5.30ಕ್ಕೆ ಚಂದನೋತ್ಸವ ಕಾರ್ಯಕ್ರಮ ಜರುಗಲಿದೆ ಎಂದರು.

ನಿರ್ದೇಶಕ ಎಚ್.ಸಿ. ರಟಗೇರಿ, ಪ್ರಾಚಾರ್ಯ ಆರ್.ಜಿ. ಭಾವನವರ, ವಿದ್ಯಾರ್ಥಿ ಪ್ರತಿನಿಧಿ ರೋಹಿತ್. ಕೆ, ವಿಶಾಲ.ಪಿ ಇದ್ದರು.

## ಸಹಕಾರಿ ಬ್ಯಾಂಕ್ ಪದಾಧಿಕಾರಿಗಳ ಆಯ್ಕೆ

■ ವಿಜಯಸಾಕ್ಷಿ ಸುದ್ದಿ, ಹರಪ'ನಹಳ್ಳಿ



ಇಲ್ಲಿನ ತಾಲೂಕಾ ಉಪ್ಪಾರ ಸೌಹಾರ್ದ ಸಹಕಾರಿ ಬ್ಯಾಂಕ್ ಅಧ್ಯಕ್ಷರಾಗಿ ಶೃಂಗಾರತೋಟದ ಮೂಕನವರ ಮೋಹನ್, ಉಪಾಧ್ಯಕ್ಷರಾಗಿ ಎ.ಎಂ. ಕವಿತಾ ಆಯ್ಕೆಯಾಗಿದ್ದಾರೆ. ಆಡಳಿತ ಮಂಡಳಿ ನಿರ್ದೇಶಕರಾಗಿ ಬಿ.ಕೆ. ಅರುಣ್, ಎಚ್.ನವೀನ್ ಕುಮಾರ, ನಾಗರಾಜ ಮಟ್ಟಿ, ನಿಂಗಪ್ಪ, ಟಿ.ಲಿಂಗರಾಜ್, ಚೌಟ್ಗಿ ನಾಗರಾಜ್, ಎ.ಕವಿತಾ, ಪಕ್ಕೀರಪ್ಪ, ಎಂ.ತಿಮ್ಮಪ್ಪ,ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

## ಸಂತಕವಿ ಸರ್ವಜ್ಞ ಜಯಂತಿ: ಇಂದು ಪೂರ್ವಭಾವಿ ಸಭೆ

■ ವಿಜಯಸಾಕ್ಷಿ ಸುದ್ದಿ, ಗದಗ

ಸರ್ಕಾರದ ಆದೇಶದನ್ವಯ ಫೆಬ್ರವರಿ 20ರಂದು ಆಚರಿಸಲಾಗುವ ಸಂತಕವಿ ಸರ್ವಜ್ಞ ಜಯಂತಿ ನಿಮಿತ್ತ ಫೆಬ್ರವರಿ 9ರಂದು ಸಂಜೆ 5.15 ಗಂಟೆಗೆ ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಪೂರ್ವಭಾವಿ ಸಭೆ ಕರೆಯಲಾಗಿದೆ.

ಸಭೆಗೆ ಹಾಜರಾಗಿ ಸಲಹೆ/ಅಭಿಪ್ರಾಯ ನೀಡಬೇಕೆಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬಿಜೆಪಿ ಮಹಿಳಾ ಮೋರ್ಚಾ ಪದಾಧಿಕಾರಿಗಳ ನೇಮಕ

■ ವಿಜಯಸಾಕ್ಷಿ ಸುದ್ದಿ, ಗದಗ







ಬಿಜೆಪಿ ರಾಜ್ಯಾಧ್ಯಕ್ಷ ಬಿ.ವಾಯ್. ವಿಜಯೇಂದ್ರ ಅವರ ಸೂಚನೆಯ ಮೇರೆಗೆ ಗದಗ ಜಿಲ್ಲೆಯ ಮಹಿಳಾ ಮೋರ್ಚಾ ನೂತನ ಅಧ್ಯಕ್ಷರಾಗಿ ಗದಗ-ಬೆಟಗೇರಿ ನಗರದ ನಿರ್ಮಲಾ ಕೊಳ್ಳಿ, ಪ್ರಧಾನ ಕಾರ್ಯದರ್ಶಿಗಳಾಗಿ ಲಕ್ಷ್ಮೇಶ್ವರ ಪಟ್ಟಣದ ಅಶ್ವಿನಿ ಅಂಕಲಕೋಟಿ, ಹೋಳೆಆಲೂರ ಗ್ರಾಮದ ಉಮಾ ಕಲ್ಲನಗೌಡ್ರ ಇವರುಗಳನ್ನು ಬಿಜೆಪಿ ಗದಗ ಜಿಲ್ಲಾಧ್ಯಕ್ಷ ತೋಟಪ್ಪ(ರಾಜು) ಕುರುಡಗಿ ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ.

ಇವರಿಗೆ ಶಾಸಕರಾದ ಸಿ.ಸಿ. ಪಾಟೀಲ, ಡಾ. ಚಂದ್ರು ಲಮಾಣಿ, ಮಾಜಿ ಸಚಿವ ಕಳಕಪ್ಪ ಬಂಡಿ, ಸಂಸದರಾದ ಶಿವಕುಮಾರ ಉದಾಸಿ, ಪಿ.ಸಿ. ಗದ್ದಿಗೌಡ್ರ, ವಿ.ಪ ಸದಸ್ಯ ಎಸ್.ವ್ಹಿ. ಸಂಕನೂರ, ಯುವ ಧುರೀಣ ಅನಿಲ ಮೆಣಸಿನಕಾಯಿ, ಪಕ್ಷದ ಹಿರಿಯರು ಹಾಗೂ ಪದಾಧಿಕಾರಿಗಳು ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

# ಬಾಂದಾರಕ್ಕೆ ಅಳವಡಿಸಿದ್ದ ಕಬ್ಬಿಣದ ಗೇಟ್ ಕಳುವು



■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಲಕ್ಷ್ಮೇಶ್ವರ ಪೊಲೀಸ್ ಠಾಣಾ ವ್ಯಾಪ್ತಿಯ ಕೊಕ್ಕರಗೊಂದಿ ನಾಗರಮಡುವು ನಡುವೆ ಹಳ್ಳಕ್ಕೆ ನಿರ್ಮಿಸಿದ್ದ ಬ್ರಿಡ್ಜ್ ಕಂ ಬಾಂದಾರಕ್ಕೆ ಅಳವಡಿಸಿದ 20 ಕಬ್ಬಿಣದ ಗೇಟ್‌ಗಳನ್ನು ಕಳ್ಳರು ಕದ್ದೊಯ್ದಿದ್ದಾರೆ.

ಸಣ್ಣ ನೀರಾವರಿ ಇಲಾಖೆಯಿಂದ ಅನೇಕ ವರ್ಷಗಳ ಹಿಂದೆ ಈ ಭಾಗದ ರೈತರು, ಜಾನುವಾರುಗಳ ಅನುಕೂಲಕ್ಕಾಗಿ ಮತ್ತು ಅಂತರ್ಜಲ ಕಾಪಾಡುವ ಉದ್ದೇಶದಿಂದ ಹಳ್ಳಕ್ಕೆ ಅಡ್ಡಲಾಗಿ ಸೇತುವೆ ನಿರ್ಮಿಸಿ, ನೀರು ತಡೆಯಲು ಗೇಟ್ ಅಳವಡಿಸಲಾಗಿತ್ತು. ವರ್ಷದುದ್ದಕ್ಕೂ ಗೇಟ್ ತೆಗೆಯುವ-ಹಾಕುವ ಮತ್ತು ಸಂರಕ್ಷಿಸುವ ಕಾರ್ಯ ಮಾಡುತ್ತಾರೆ.

ಇದೀಗ ಸೇತುವೆಗೆ ಅಳವಡಿಸಿದ್ದ 11 ಗೇಟ್ ಮತ್ತು ಸೇತುವೆ ಹತ್ತಿರದ ಸಂಗ್ರಹಣಾ ಕೊಠಡಿಯಲ್ಲಿದ್ದ 9 ಗೇಟ್‌ಗನ್ನು ರಾತ್ರೋರಾತ್ರಿ ಕಳ್ಳತನ ಮಾಡಿದ್ದಾರೆ.

ಒಂದು ಗೇಟ್ ಅಂದಾಜು 1 ಕ್ವಿಂಟಲ್ 30 ಕೆಜಿಗಿಂತ ಹೆಚ್ಚು ತೂಕದ್ದಾಗಿದ್ದು, ಅಂತಹ 20 ಗೇಟ್‌ಗಳನ್ನು ಕಳ್ಳರ ತಂಡ ಹೊತ್ತೊಯ್ದಿದೆ. ಒಬ್ಬಿಬ್ಬರಿಂದ ಈ ಕಳ್ಳತನ ಸಾಧ್ಯವಿಲ್ಲವೆನ್ನುವ ಸಾರ್ವಜನಿಕರು, ಹಳ್ಳದುದ್ದಕ್ಕೂ ಮರಳುಗಳ್ಳತನ ಮಾಡುವವರೇ ಈ ಕೃತ್ಯ ಮಾಡಿರಬಹುದು ಎಂದು ಶಂಕೆ ವ್ಯಕ್ತಪಡಿಸಿದ್ದಾರೆ. ತಾಲೂಕಿನಲ್ಲಿ ಇದೇ ರೀತಿ ಹಲವು ಕಡೆ ಹಳ್ಳಕ್ಕೆ ಅಡ್ಡಲಾಗಿ ನಿರ್ಮಿಸಿದ ಸೇತುವೆಗೆ ಅಳವಡಿಸಿರುವ ಗೇಟ್ ರಕ್ಷಣೆಗೆ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಸಣ್ಣ ನೀರಾವರಿ ಇಲಾಖೆಯ ಎಇಇ ಪ್ರವೀಣ ಪಾಟೀಲ ಅವರು ಸೇತುವೆಗೆ ಅಳವಡಿಸಿದ್ದ 20 ಗೇಟ್ ಕಳ್ಳತನವಾಗಿರುವ ಬಗ್ಗೆ ಕೊಟ್ಟ ದೂರಿನನ್ವಯ ಪೊಲೀಸರು ಸ್ಥಳ ಪರಿಶೀಲನೆ ಮಾಡಿ ತನಿಖೆ ಕೈಗೊಂಡಿದ್ದಾರೆ.


**ಕರ್ನಾಟಕ ನೀರಾವರಿ ನಿಗಮ ನಿಯಮಿತ**

**(ಕರ್ನಾಟಕ ಸರ್ಕಾರದ ಉದ್ಯಮ)**

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಸಿಂಗಟಾಲೂರು ಏತ ನೀರಾವರಿ ಯೋಜನೆ, ವಿಭಾಗ ನಂ.1, ಮುಂಡರಗಿ, ಗದಗ ಜಿಲ್ಲೆ.
Ph. No. 08371-295016 e-mail: eeslis1mdg@gmail.com

**ಅಲ್ಪಾವಧಿ ಟೆಂಡರ್ ಪ್ರಕಟಣೆ**

**(ONLY THROUGH "e-Procurement" SYSTEM)**

ಉಲ್ಲೇಖ: (1) ಈ ಕಛೇರಿ ಟೆಂಡರ್ ಪ್ರಕಟಣೆ ಪತ್ರ ಸಂಖ್ಯೆ:1843/2023-24 ದಿನಾಂಕ: 08.02.2024 (2) ಈ ಕಛೇರಿ ಟೆಂಡರ್ ಪ್ರಕಟಣೆ ಪತ್ರ ಸಂಖ್ಯೆ:1844/2023-24 ದಿನಾಂಕ: 08.02.2024 (3) ಈ ಕಛೇರಿ ಟೆಂಡರ್ ಪ್ರಕಟಣೆ ಪತ್ರ ಸಂಖ್ಯೆ:1845/2023-24 ದಿನಾಂಕ: 08.02.2024

ಸಿಂಗಟಾಲೂರು ಏತ ನೀರಾವರಿ ಯೋಜನೆ ಮುಂಡರಗಿ ವಿಭಾಗ-01 ಕಛೇರಿ ಅಡಿಯ ಹಿರೇಹಳ್ಳ ಯೋಜನೆಯಡಿ ಬರುವ ಬಲದಂಡೆ ಮತ್ತು ಎಡದಂಡೆ ಕಾಲುವೆ ಜಾಲಗಳ ನಿರ್ವಹಣೆ ಹಾಗೂ ಅಭಿವೃದ್ಧಿ ಕಾಮಗಾರಿಗಳಿಗೆ ಲೆಕ್ಕಶೀರ್ಷಿಕೆ-4701 ರಡಿ ಉಲ್ಲೇಖ(1), (2) ಹಾಗೂ ಉಲ್ಲೇಖ(3)ರಲ್ಲಿನ ಅಲ್ಪಾವಧಿ ಟೆಂಡರ್ ಪ್ರಕಟಣೆಗಳಲ್ಲಿ ಸೂಚಿಸಿರುವಂತೆ, ಅರ್ಹ ಗುತ್ತಿಗೆದಾರರಿಂದ e-Portal **Indent No.832, Indent No.833** ಮತ್ತು **Indent No.834** ರಂತೆ ದ್ವಿ-ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಸದರಿ ಕಾಮಗಾರಿಗಳ ಟೆಂಡರ್‌ಗೆ ಇಟ್ಟ ಮೊತ್ತವು (ಜಿ.ಎಸ್.ಟಿ. ಸೇರಿ) ಕ್ರಮವಾಗಿ **ರೂ. 9.98 ಲಕ್ಷ, ರೂ.29.99 ಲಕ್ಷ ಹಾಗೂ ರೂ.29.99 ಲಕ್ಷಗಳು ಇದ್ದು, ಅವುಗಳ ಇ.ಎಂ.ಡಿ. ಮೊತ್ತವು** ಕ್ರಮವಾಗಿ **ರೂ.25000/-, ರೂ.60000/- ಮತ್ತು ರೂ.60000/-** ಆಗಿರುತ್ತವೆ.

ಇನ್ನುಳಿದಂತೆ, ಸದರಿ ಟೆಂಡರಿಗಳಿಗೆ ಸಂಬಂಧಿಸಿದ ಷರತ್ತು/ ನಿಯಮಾವಳಿಗಳ ಮಾಹಿತಿಯನ್ನು ಕೆಳಗೆ ಸಹಿ ಮಾಡಿರುವ ಅಧಿಕಾರಿಯವರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ ಹಾಗೂ ದಿನಾಂಕ: 09.02.2024ರ ನಂತರ "https://kppp.karnataka.gov.in", ವೆಬ್‌ಸೈಟ್ ನಲ್ಲಿ ಟೆಂಡರ್ ಡಾಕ್ಯೂಮೆಂಟ್ ಅನ್ನು ಡೌನ್‌ಲೋಡ್ ಮಾಡಿಕೊಂಡು ಬಿಡ್ಡನ್ನು ಸಲ್ಲಿಸಬಹುದಾಗಿರುತ್ತದೆ. ಸದರಿ ಕಾಮಗಾರಿಗಳ ಟೆಂಡರ್‌ಗಳಿಗೆ ಬಿಡ್ಡನ್ನು ಸಲ್ಲಿಸಲು ಕೊನೆಯ ದಿನಾಂಕ:19.02.2024 ಎಂದು ಮತ್ತು ಟೆಂಡರ್‌ಗಳ ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ:21.02.2024 ಎಂದು ನಿಗದಿಪಡಿಸಲಾಗಿದೆ. ಇನ್ನಿತರೆ ಹೆಚ್ಚಿನ ಮಾಹಿತಿಯನ್ನು **e-procurement Helpdesk Phone No's: +91-80-46010000, +91-80-68948777** ಸಂಪರ್ಕಿಸಿ ಪಡೆಯಬಹುದಾಗಿದೆ. ನಿಬಂಧನೆಗೊಳಪಟ್ಟ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರ ಪಡೆದಿರುವ ಅಧಿಕಾರಿಯು ಎಲ್ಲಾ ಅಥವಾ ಯಾವುದೇ ಟೆಂಡರ್‌ನ್ನು ಕಾರಣ ನೀಡದೆ ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/-ಕಾರ್ಯಪಾಲಕ ಅಭಿಯಂತರರು,
ಸಿಂಗಟಾಲೂರು ಏತ ನೀರಾವರಿ ಯೋಜನೆ,
ನಂ. 1 ವಿಭಾಗ, ಕರ್ನಾಟಕ ನೀರಾವರಿ ನಿಗಮ ನಿಯಮಿತ,
ಮುಂಡರಗಿ, ಗದಗ ಜಿಲ್ಲೆ.

ವಾ.ಸಾ.ಇ./ಗದಗ/ 523/ದೇಶಪಾಂಡೆಪಬ್ಲಿಸಿಟಿ/2023-24


VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka